

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

ಸಂಪಾದಕರು : ಮಾರುತಿ ಹೊಸಮನಿ
Editor : MARUTI BASAVANTAPPA HOSAMANI
Cell : +91 97413 19119

SIHI KAHI
KANNADA DAILY MORNING
BAGALKOT

Volume : 06 | Issue : 189 | Friday 15-12-2023 | E-mail : maruti.b.hosamani76@gmail.com | Page: 4 | Price : Rs. 1/-


## ಶಾಲೋಮ್ ಪ್ರಾರ್ಥನಾಲಯದಿಂದ 4ನೇ ವರ್ಷದ ರಕ್ತದಾನ ಶಿಬಿರ





ಕೂಡ್ಲಿಗಿ : ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೂಡ್ಲಿಗಿ ಪಟ್ಟಣದ 16ನೇ ವಾರ್ಡಿನಲ್ಲಿ ಎನ್‌ಎಚ್ 50 ಪಕ್ಕ ದಲ್ಲಿ ಬರುವ ಶಾಲೋಮ್ ಪ್ರಾರ್ಥನಾಲಯದಲ್ಲಿ ಸಭೆಯ ಸೇವಕರಾದಂತ ಪರಶುರಾಮ್ ಪಾಸ್ಟರ್ ಹಾಗೂ ಸಭೆಯ ಸದಸ್ಯರು ಹಾಗೂ ಸರ್ವರೂ ಕಾರ್ಯಕ್ರಮದಲ್ಲಿ ಪಾಲ್ಗೊಂಡು ರಕ್ತದಾನ ಶಿಬಿರ ಯಶಸ್ವಿ ಗೊಳಿಸಲು ದಿನಾಂಕ 15– 12–2023 ರ ಶುಕ್ರವಾರ ರಂದು ನಡೆಯುವ ಸ್ವಯಂ ಪ್ರೇರಿತ ರಕ್ತ ದಾನ ಶಿಬಿರವನ್ನು ಸತತವಾಗಿ 4ನೇ ವರ್ಷದ ಕ್ರಿಸ್ ಮಸ್ ಹಬ್ಬದ ಪ್ರಯುಕ್ತವಾಗಿ " ಯಾವುದೇ ವ್ಯಕ್ತಿ ಇನ್ನೊಬ್ಬರ ಜೀವ ಉಳಿಸಲು ತನ್ನ ರಕ್ತವನ್ನು ಸ್ವಯಂ ಪ್ರೇರಿತನಾಗಿ ಯಾವುದೇ ಪ್ರತೀ ಫಲಾಪೇಕ್ಷೆ ಇಲ್ಲದೆ ರಕ್ತದಾನ ಮಾಡುವುದರಿಂದ ಪ್ರತಿ ದಿನಾಲೂ ನಡೆಯುವಂತಹ ನಾನಾ ಘಟನೆಗಳಿಂದ ಅನೇಕ ರೋಗಗಳಿಗೆ ರಕ್ತದ ಅವಶ್ಯಕತೆ ಇರುವಂತಹ ರೋಗಿಗಳಿಗೆ ಹಾಗೂ ಅಪಘಾತದಲ್ಲಿ ಉಂಟಾದಂತಹ ವ್ಯಕ್ತಿಗಳಿಗೆ, ಗರ್ಭಿಣಿ ಸ್ತ್ರೀಯರಿಗೂ, ಆರೋಗ್ಯದಲ್ಲಿ ತೊಂದರೆ ಆದಂತಹ ಕೆಲವೊಂದು ಸಂದರ್ಭದಲ್ಲಿ ಚಿಕ್ಕ ಚಿಕ್ಕ ಮಕ್ಕಳಿಗೂ ರಕ್ತದ ಅವಶ್ಯಕತೆ ಇರುವುದರಿಂದ ರಕ್ತ ದಾನಿಗಳಿಂದ ಮಾತ್ರ ಇನ್ನೊಬ್ಬ ವ್ಯಕ್ತಿಗಳನ್ನು ಜೀವ ರಕ್ಷಣೆ ಮಾಡಲು ಸಾಧ್ಯ ಸ್ವಯಂ ಪ್ರೇರಿತ ರಕ್ತದಾನ ಮಾಡುವುದರಿಂದ ಜೀವದ ರಕ್ಷಣೆ ಕಾಪಾಡಲು ಸಾಧ್ಯ ರಕ್ತದಾನ ಮಾಡುವುದರಿಂದ ಆಗುವಂತ ಪ್ರಯೋಜನ ಗಳೆಂದರೆ * ರಕ್ತದಾನ ಮಾಡುವುದರಿಂದ ದಾನಿಗಳ ದೇಹದಲ್ಲಿ ಹೊಸ ರಕ್ತ ಉತ್ಪತ್ತಿಯಾಗಲು ಪ್ರಚೋದನೆ ಆಗುತ್ತದೆ,

* ದೇಹದಲ್ಲಿ ಹೊಸ ರಕ್ತ ಚಲನೆಯಿಂದ ಕಾರ್ಯ ತತ್ಪರತೆ, ಜ್ಞಾಪಕ ಶಕ್ತಿ ವೃದ್ಧಿಯಾಗುತ್ತದೆ,
* ರಕ್ತದಲ್ಲಿ ಕೊಬ್ಬಿನಾಂಶ ಕಡಿಮೆ ಮಾಡಲು ಸಹಾಯವಾಗುತ್ತದೆ.
* ಹೃದಯಾ ಘಾತವನ್ನು ಶೇಕಡ 80ಕ್ಕಿಂತಲೂ ಜಾಸ್ತಿ ತಡೆಯಲು ಸಹಾಯವಾಗುತ್ತದೆ
* ರಕ್ತದ ಒತ್ತಡ ಇತರೆ ಕೆಲವು ರೋಗಗಳನ್ನು ತಡೆಗಟ್ಟಲು ಸಹಾಯವಾಗುತ್ತದೆ

ಯಾರು ರಕ್ತದಾನ ಮಾಡಬಹುದು ಎಂದರೆ

ಹೆಣ್ಣು ಮಕ್ಕಳೆಂಬ ಭೇದವಿಲ್ಲದೆ 18 ರಿಂದ 60 ವರ್ಷದ ಒಳಗಿರುವ ಎಲ್ಲಾ ಆರೋಗ್ಯವಂತ ವ್ಯಕ್ತಿಗಳು ರಕ್ತದಾನ ಮಾಡಬಹುದು

* ಗಂಡಸರು 3 ತಿಂಗಳು ಒಮ್ಮೆ ಮತ್ತು ಹೆಂಗಸರು 4 ತಿಂಗಳಿಗೆ ಒಮ್ಮೆ ರಕ್ತದಾನ ಮಾಡಬಹುದು
* ರಕ್ತದಾನ ಮಾಡುವ ದಾನಿಯ ದೇಹದ ತೂಕ 45 ಕೆಜಿ ಗಿಂತ ಎಚ್ಚಿರಬೇಕು
* ರಕ್ತದಲ್ಲಿ ಹಿಮೋಗ್ಲೋಬಿನ್ ಅಂಶ 12.5 ಗ್ರಾಂ ಗಿಂತ ಹೆಚ್ಚಿರಬೇಕು
* ಸಿಸ್ಟೋಲಿಕ್ ರಕ್ತ ದೊತ್ತಡವು 100 ರಿಂದ 140 ಇದ್ದು ಡಯಲ್ ಸ್ಟೋಲೈಕ್ ಒತ್ತಡವು 70ರಿಂದ 100 ಇರುವವರು ರಕ್ತದಾನ ಮಾಡಬಹುದು ಎಂದು ತಿಳಿಸಿದ್ದಾರೆ, ಹರ್ಷದಿಂದ ಬನ್ನಿ ರಕ್ತದಾನ ಮಾಡಿರಿ ರಕ್ತದಾನ ಮಾಡಿ ಜೀವ ಉಳಿಸಿ ಸರ್ವ ಆಸಕ್ತ ಸ್ವಯಂ ಪ್ರೇರಿತ ರಕ್ತದಾನಿಗಳಿಗೆ ಸುಸ್ವಾಗತ ಶಾಲೋಮ್ ಪ್ರಾರ್ಥನಾಲಯ ಸೇವಕರು ಪರಶುರಾವ್ ಪಾಸ್ಟರ್ ತಿಳಿಸಿರುತ್ತಾರೆ.




**ಜಿಲ್ಲಾ ವರದಿಗಾರರು:**
**ರಾಘವೇಂದ್ರ. ಬಿ. ಸಾಲುಮನಿ**

## "ತ್ರಿಷ" ಎರಡನೇ ಹಂತದ ಚಿತ್ರೀಕರಣ ಮುಕ್ತಾಯ





ಬೆಂಗಳೂರು : ಸ್ನೇಹಾಲಯಂ ಕ್ರಿಯೇಷನ್ಸ್ ಬ್ಯಾನರಡಿಯಲ್ಲಿ ಬಿ.ಆರ್.ಮೂವ್ವೀಸ್ ಅವರ ಪಂಚಭಾಷಾ ನಟ ಸುಮನ್ ಪ್ರಧಾನ ಪಾತ್ರದಲ್ಲಿ ನಟಿಸುತ್ತಿರುವ ಹಾರರ್ ಜೊತೆಗೆ ಭಕ್ತಿ ಪ್ರಧಾನ ಕಥಾಹಂದರ ಹೊಂದಿರುವ ಕನ್ನಡ ಮತ್ತು ತೆಲುಗು ಭಾಷೆಯಲ್ಲಿ ನಿರ್ಮಾಣ ವಾಗುತ್ತಿರುವ 'ತ್ರಿಷ' ಚಿತ್ರದ ಎರಡನೇ ಹಂತದ ಚಿತ್ರೀಕರಣ ಮುಕ್ತಾಯ ಗೊಂಡಿತು.

ಬಹು ಭಾಷಾ ಚಲನಚಿತ್ರ ನಿರ್ದೇಶಕ ಆರ್. ಕೆ. ಗಾಂಧಿ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶಿಸುತ್ತಿರುವ ಈ ಚಿತ್ರದ ಎರಡನೇ ಹಂತದ ಚಿತ್ರೀಕರಣ ಹೊಸಕೋಟೆ ಸಮೀಪದ ಭಕ್ತರ ಹಳ್ಳಿಯಲ್ಲಿ ಸತತ ಚಿತ್ರೀಕರಣ ನಡೆಸಲಾಗಿದ್ದು ಊರ ಜನರಿಗೆ ವಿರೂಪಾಕ್ಷ ಶಾಪ ಕೊಡುವ ದೃಶ್ಯ, ಶಾಪದಿಂದ 'ತ್ರಿಷ' ಎಂಬ ಮಗುವಿನ ಆತ್ಮ ಊರ ಜನರನ್ನು ಕೊಲ್ಲುವ ದೃಶ್ಯ, ಗುರೂಜಿಯೊಬ್ಬರು ಚಿತ್ರದ ನಾಯಕ, ನಾಯಕಿ ಹಾಗೂ ಅವರ ಗೆಳೆಯರಿಗೆ ಹಿಂದಿನ ಜನ್ಮದ ರಹಸ್ಯ ತಿಳಿಸುವ ಸನ್ನಿವೇಶಗಳನ್ನು ಇಲ್ಲಿ ಚಿತ್ರೀಕರಿಸಲಾಯಿತು. ಇದರೊಂದಿಗೆ ಚಿತ್ರದ ಶೇ.60 ಭಾಗದ ಚಿತ್ರೀಕರಣ ಮುಕ್ತಾಯ ಗೊಂಡಿದ್ದು, ಮೂರನೇ ಹಂತದ ಚಿತ್ರೀಕರಣಕ್ಕೆ ಹೊಸಕೋಟೆ ಸಮೀಪದ ಕಂಬ್ಳೀಪುರದಲ್ಲಿ ಸಿದ್ಧತೆ ಮಾಡಿ ಕೊಳ್ಳಲಾಗುತ್ತಿದೆ ಎಂದು ನಿರ್ದೇಶಕ ಆರ್.ಕೆ.ಗಾಂಧಿ ತಿಳಿಸಿದರು.

ತಾರಾಂಗಣದಲ್ಲಿ ಸುಮನ್, ಕಾಲಿಕೇಯ ಪ್ರಭಾಕರ್,ಖುಷಿಗೌಡ, ಸುರೇಶ್ ಸೂರ್ಯ, ಸಿದ್ದುಕೃಷ್ಣ ಢೇಕಣೆ, ಡಾ.ಈಶ್ವರ್ ನಾಗನಾಥ್, ಮಹಾಂತೇಶ ವಿರೂಪಾಕ್ಷಿ ಸಮಯ್, ದುರ್ಗಾಭವಾನಿ, ಭಕ್ತರಹಳ್ಳಿ ರವಿ, ಆಟೋ ಮೂರ್ತಿ, ಕ್ಯಾಬ್ ನಾಗೇಂದ್ರ, ಲಿಂಗರಾಜು, ಶರತ್, ಮಲ್ಲೇಶ್ವರಿ, ಸುಪ್ರಿತಾರಾಜ್, ಗಣೇಶ್ರಾವ್ ಕೇಸರಕರ್, ಸುನಂದಾ ಕಲಬುರ್ಗಿ, ಯುವೀನ ಮುಂತಾದವರು ನಟಿಸುತ್ತಿರುವ 'ತ್ರಿಷ' ಚಿತ್ರಕ್ಕೆ ಪ್ರವೋದ್ ಭಾರತೀಯ ಛಾಯಾಗ್ರಹಣ, ಎಂ.ಎಲ್. ರಾಜ ಸಾಹಿತ್ಯ ಸಂಗೀತ, ಪ್ರಸಾದ ಕಲೆ, ನಾರ್ಸಿಂಗ್ ರಾಥೋಡ್ ಸಂಕಲನ, ಸೂರ್ಯಕಿರಣ್ ನೃತ್ಯ , ಪಿ.ಆರ್.ಓ ಧೀರಜ್ ಅಪ್ಪಾಜಿ , ಡಾ.ಪ್ರಭು ಗಂಜಿಹಾಳ ,ಡಾ. ವೀರೇಶ ಹಂಡಿಗಿ ಪ್ರಚಾರಕಲೆ ಇದ್ದು ಡಾ.ಈಶ್ವರ್ ನಾಗನಾಥ್, ಹನುಮಂತರಾಯಪ್ಪ ಎಂ.ಎಸ್.ದಂಡಿನ್ ನಿರ್ಮಾಪಕರಾಗಿದ್ದಾರೆ.

**ವರದಿ–ಡಾ.ಪ್ರಭು ಗಂಜಿಹಾಳ.**
**ಮೋ–9448775346**

## ಅಪರಾಧ ತಡೆಗಟ್ಟುವಲ್ಲಿ ಸಾರ್ವಜನಿಕರ ಸಹಕಾರ ಮುಖ್ಯ




ರಬಕವಿ–ಬನಹಟ್ಟಿ : ಇಂದಿನ ದಿನಗಳಲ್ಲಿ ಅಪರಾಧಗಳನ್ನು ತಡೆ ಗಟ್ಟುವ ನಿಟ್ಟಿನಲ್ಲಿ ಸಾರ್ವಜನಿಕರು ಪೊಲೀಸ್ ಇಲಾಖೆಗೆ ಸಹಕಾರ ನೀಡಬೇಕು. ಇದರಿಂದ ಇಲಾಖೆಗೂ ಸಹಾಯವಾಗುತ್ತದೆ ಎಂದು ಸ್ಥಳೀಯ ಎಎಸ್‌ಐ ಶ್ರೀಮಂತ ಬಾಬಾನಗರ ತಿಳಿಸಿದರು.

ಅವರು ಶುಕ್ರವಾರ ಸ್ಥಳೀಯ ಬಸ್ ನಿಲ್ದಾಣದ ಹತ್ತಿರ ಅಪರಾಧ ಮಾಸಾಚರಣೆ ಅಂಗವಾಗಿ ಹಮ್ಮಿಕೊಂಡ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಪೊಲೀಸ್ ಠಾಣೆಯ ವ್ಯಾಪ್ತಿಯ ಯಾವುದೆ ಪ್ರದೇಶದಲ್ಲಿ ಅಪರಾಧ ನಡೆದರೆ ಕೂಡಲೇ ಸ್ಥಳೀಯ ಪೊಲೀಸ್ ಠಾಣೆಗೆ ಇಲ್ಲವೆ ಅಧಿಕಾರಿಗಳ ಗಮನಕ್ಕೆ ತೆಗೆದುಕೊಂಡು ಬರಬೇಕು. ಸಾರ್ವಜನಿಕರು ಯಾವುದೆ ತುರ್ತು ಸಂದರ್ಭದಲ್ಲಿ 112 ಕರೆ ಮಾಡಿದರೆ ಅಪರಾಧ ನಡೆದ ಸ್ಥಳಕ್ಕೆ ವಾಹನ ತೆರಳುತ್ತದೆಂದು ಬಾಬಾನಗರ ತಿಳಿಸಿದರು.

ನ್ಯಾಯವಾದಿ ರವಿ ಸಂಪಗಾಂವಿ ಮಾತನಾಡಿ, ವಾಹನ ಚಾಲಕರು ಕಡ್ಡಾಯವಾಗಿ ರಸ್ತೆ ನಿಯಮಗಳನ್ನು ಪಾಲಿಸುವುದರಿಂದ ಅಪಘಾತಗಳನ್ನು ತಡೆಯಬಹುದಾಗಿದೆ. ದ್ವಿಚಕ್ರ ವಾಹನ ಚಾಲಕರು ವಾಹನ ಚಾಲನೆಗೆ ಬೇಕಾಗುವ ಎಲ್ಲ ಕಾಗದ ಪತ್ರಗಳನ್ನು ತಮ್ಮ ಬಳಿ ಇಟ್ಟುಕೊಂಡಿರಬೇಕು. ಯುವಕರೇ ಹೆಚ್ಚಿನ ಸಂಖ್ಯೆಯಲ್ಲಿ ದ್ವಿಚಕ್ರ ವಾಹನಗಳನ್ನು ಜಾಗೃತೆಯಿಂದ ಚಲಾಯಿಸಬೇಕು. ವೇಗವಾಗಿ ವಾಹನ ಚಲಾಯಿಸುವುದರಿಂದ ಬಹಳಷ್ಟು ಸಮಸ್ಯೆಗಳು ಉಂಟಾಗುತ್ತವೆ ಎಂದರು. ಈ ಸಂದರ್ಭದಲ್ಲಿ ಎನ್.ಬಿ. ಆಯತವಾಡ, ಎಂ.ಎಂ. ಗುಂಜಟ್ಟಿ, ಎ.ಎ. ಪಟ್ಟಣಶೆಟ್ಟಿ, ಗೌರಿಶಂಕರ ಬಿರಾದಾರ, ಧರೆಪ್ಪ ಕುಂಬಾರ, ವಿ.ಎಸ್. ಅಜ್ಜನಗೌಡ ಸೇರಿದಂತೆ ಅನೇಕರು ಇದ್ದರು.

## ಡಾ. ಬಿ.ಆರ್.ಅಂಬೇಡ್ಕರ್ ಭವನ ನಿರ್ಮಿಸಲು ಎರಡು ಎಕರೆ ಮಂಜೂರಿಸಲು ಉನ್ನತ ಅಧಿಕಾರಿಗಳು ಜೊತೆ ಮಾತನಾಡಿದ ಶಾಸಕರು



ಮೊಳಕಾಲ್ಮುರು : ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕು ಈ ದಿನ ಮೊಳಕಾಲ್ಮೂರು ಕ್ಷೇತ್ರದ ಗೌರವಾನ್ವಿತ ಶಾಸಕರಾದ ಶ್ರೀ ಎನ್ ವೈ ಗೋಪಾಲಕೃಷ್ಣ ಜಿ ಯವರು ಮೊಳಕಾಲ್ಮೂರು ತಾಲೂಕಿಗೆ ಡಾ. ಬಿಆರ್ ಅಂಬೇಡ್ಕರ್ ಭವನವನ್ನು ನಿರ್ಮಿಸಲು ಮತ್ತು ಬಹುಸಂಖ್ಯಾತ ಎಸ್ಸಿ ಜನಾಂಗದ ಸಾಮಾಜಿಕ ಅಭಿವೃದ್ಧಿಗಾಗಿ ಎರಡು ಎಕರೆ ಜಮೀನನ್ನು ಮಂಜೂರು ಮಾಡುವಂತೆ ಮಾನ್ಯ ಜಿಲ್ಲಾಧಿಕಾರಿಗಳು ಚಿತ್ರದುರ್ಗ ಮತ್ತು ಬೆಂಗಳೂರು ರೆವೆನ್ಯೂ ಕಮಿಷನರ್ ಹಾಗೂ ಇತರೆ ಉನ್ನತಾಧಿಕಾರಿಗಳ ಜೊತೆ ಮಾತನಾಡಿದರು ನಾಯಕನಹಟ್ಟಿ ಒಳ ಮಠದ ಹತ್ತಿರ ಒಂದು ಕೋಟಿ 50 ಲಕ್ಷ ಸೇತುವೆ ನಿರ್ಮಾಣ ಮಾಡಿಸಿದರು ಮತ್ತು ರಾಂಪುರ ಗ್ರಾಮದಲ್ಲಿ 18 ಲಕ್ಷದ 50,000 ನಾಡ ಕಚೇರಿಯನ್ನು ಸಹ ಭೂಮಿ ಪೂಜೆ ಮಾಡಿದರು ಕೋನಸಾಗರ ಗ್ರಾಮದಲ್ಲಿ ಬರಿ ಎಸ್ ಸಿ ಎಸ್ ಟಿ ಜನಾಂಗದವರು ಹೆಚ್ಚು ಇದ್ದು ಆರು ಕೋಟಿ 50 ಲಕ್ಷ ವೆಚ್ಚದ ವಸತಿ ಶಾಲೆಯನ್ನು ಸಹ ಭೂಮಿ ಪೂಜೆ ಮಾಡಿಸಿದಂತ ಶಾಸಕರು ಯಾವುದೇ ಒಳ್ಳೆ ಯೋಜನೆಗಳು ಆಗಬೇಕಾದರೆ ನಿಜವಾದಂತ ಎನ್ ವೈ ಗೋಪಾಲಕೃಷ್ಣ ಶಾಸಕರಿಂದಲೇ ಮಾತ್ರ ಇಂಥಾ ಯೋಜನೆಗಳು ಅಭಿವೃದ್ಧಿಗಳು ಆಗುತ್ತವೆ ಸಂವಿಧಾನಾತ್ಮಕವಾಗಿ ಎಲ್ಲಾ ಸಮುದಾಯದ ದಲಿತರಿಗೆ ಆಗಬೇಕಾದ ಯೋಜನೆಗಳನ್ನು ರೂಪಿಸುತ್ತಾರೆ ಶಾಸಕರು ಮೊಳಕಾಲ್ಮೂರು ಕ್ಷೇತ್ರದ ದಲಿತ ಮುಖಂಡರು ಹಾಗೂ ಮಾಜಿ ಪಟ್ಟಣ ಪಂಚಾಯತ ಅಧ್ಯಕ್ಷ ಪ್ರಕಾಶ್ ಹಾಜರಿದ್ದು ಎನ್ ವೈ ಗೋಪಾಲಕೃಷ್ಣ ಜಿ ಅವರನ್ನು ಸನ್ಮಾನಿಸಿ ಅಭಿನಂದಿಸಿದರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು:**
**ತಿಪ್ಪೇಸ್ವಾಮಿ.ಹೊಂಬಾಳೆ.**
**ಮೊಳಕಾಲ್ಮುರು**

## ಸಾಧನೆಗೆ ಮೂಲ ಅಡಿಪಾಯ ಆರೋಗ್ಯ: ಗುರುಮಹಾಂತ ಶ್ರೀಗಳು



ಜಮಖಂಡಿ : ಎಲ್ಲ ಸಾಧನೆಗೆ ಮೂಲ ಅಡಿಪಾಯ ಆರೋಗ್ಯ. ಆರೋಗ್ಯವನ್ನು ಕಾಪಾಡಿಕೊಳ್ಳುವುದು ನಮ್ಮ ಕೈಯಲ್ಲಿಯೇ ಇದೆ. ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಂಡರೆ ಭೌತಿಕ ಮತ್ತು ಆಧ್ಯಾತ್ಮಿಕ ಸಾಧನೆ ಸಾಧ್ಯ ಎಂದು ಚಿತ್ತರಗಿ–ಇಳಕಲ್ ವಿಜಯ ಮಹಾಂತೇಶ ಸಂಸ್ಥಾನ ಮಠದ ಗುರುಮಹಾಂತ ಮಹಾಸ್ವಾಮಿಗಳು ಹೇಳಿದರು.

ಸ್ಥಳೀಯ ಬಸವಜ್ಯೋತಿ ವಿಜ್ಞಾನ ಮತ್ತು ವಾಣಿಜ್ಯ ಪದವಿಪೂರ್ವ ಮಹಾವಿದ್ಯಾಲಯದ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ 'ಅನುಭಾವ' ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಅನಾರೋಗ್ಯವಾದಾಗ ಆರೋಗ್ಯದ ಮಹಿಮೆ ಮತ್ತು ಮಹತ್ವ ಗೊತ್ತಾಗುತ್ತದೆ. ದುಶ್ಚಟ ಮತ್ತು ಅಶುದ್ಧವಾದ ಆಹಾರದಿಂದ ದೂರವಿರಬೇಕು. ಮನಸ್ಸು ಕೆಟ್ಟರೆ ಆರೋಗ್ಯ ಕೆಡುತ್ತದೆ. ಮನಸ್ಸು ಶುದ್ಧವಾಗಿರಲು ದಾರ್ಶನಿಕರ ಬೋಧನೆಗಳನ್ನು ಓದಬೇಕು. ದ್ವೇಷ, ಅಸೂಯೆ, ಹೊಟ್ಟೆಕಿಚ್ಚು ಕಳೆದುಕೊಂಡು ಪ್ರೀತಿ, ಕರುಣೆ ಬರಬೇಕಾದರೆ ಸತ್ಸಂಗ ಮಾಡಬೇಕು ಎಂದು ನುಡಿದರು.

ಶಿರೂರಿನ ಮಹಾಂತತೀರ್ಥ ಮಠದ ಡಾ.ಬಸವಲಿಂಗ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿ ಮಾತನಾಡಿ, ಶರಣರು ಅನುಭಾವಿಗಳಾಗಿದ್ದರು. ಅನುಭಾವ ಎಂದರೆ ಆತ್ಮವಿದ್ಯೆ. ಏಕಾಗ್ರತೆಗೆ ಇಷ್ಟಲಿಂಗ ಪೂಜೆ ಅಗತ್ಯ. ಇಷ್ಟಲಿಂಗ ಪೂಜೆಯಿಂದ ಮನವು ಮಹಾಮನ, ಚಿನ್ಮನ, ಘನಮನವಾಗುತ್ತದೆ ಎಂದು ಆಶೀರ್ವಚನ ನೀಡಿದರು.

ಸಾಹಿತಿ ಶೇಖರಗೌಡ ಗೌಡರ, ಸಂಸ್ಥೆಯ ಅಧ್ಯಕ್ಷ ಡಾ.ಗಿರೀಶ ಕಡ್ಡಿ, ಕಾರ್ಯದರ್ಶಿ ಶಕುಂತಲಾ ಕಡ್ಡಿ ಇದ್ದರು. ಸುವಾಸ ಮಠಪತಿ ವಚನ ಪ್ರಾರ್ಥನೆ ಸಲ್ಲಿಸಿದರು. ಪ್ರಾಚಾರ್ಯ ಡಾ.ಟಿ.ಪಿ. ಗಿರಡ್ಡಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪನ್ಯಾಸಕ ಮೌನೇಶ ಬಡಿಗೇರ ನಿರೂಪಿಸಿದರು. ಆಡಳಿತಾಧಿಕಾರಿ ಪ್ರೊ.ಬಸವರಾಜ ಕಡ್ಡಿ ವಂದಿಸಿದರು.

## ಬಿಸಿ ಊಟದ ಜೊತೆ ಗುಲಾಮ್–ಜಾಮೂನ್



ಇಂಡಿ : ತಾಲೂಕಿನ ಅಗರಖೇಡ ಗ್ರಾಮದ ಸರಕಾರಿ ಕನ್ನಡ ಹೆಣ್ಣು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸರಕಾರ ಮಕ್ಕಳಿಗೆ ನೀಡುತ್ತೀರುವ ಮಧ್ಯಾಹ್ನ ಬಿಸಿ ಊಟದ ಜೊತೆಯಲ್ಲಿ ಗುಲಾಮ್–ಜಾಮೂನ್ ನೀಡಲಾಗುತ್ತಿದೆ.ವಾರದಲ್ಲಿ ಬೇರೆ ಬೇರೆ ರೀತಿಯ ರುಚಿಕರವಾದ ಜಾಮೂನ್, ಇಡ್ಲಿ, ದೋಸೆ, ಮಸಾಲಾರೈಸ್, ಪುಲಾವ, ಹೀಗೆ ವಿಧ–ವಿಧವಾದ ಭೋಜನವನ್ನು ಇಲ್ಲಿ ಸರಕಾರಿ ಕನ್ನಡ ಹೆಣ್ಣು ಮಕ್ಕಳ ಶಾಲೆಯಲ್ಲಿ ನೀಡುತ್ತಿರುವುದು ಅತ್ಯಂತ ಶ್ಲಾಘನೀಯವಾಗಿದೆ.

ನಮ್ಮ ಶಾಲೆಗೆ ಬರುವಂತಹ ವಿದ್ಯಾರ್ಥಿನಿಯರು ತುಂಬ ಬಡ ಕುಟುಂಬ ದಿಂದ ಬಂದವರಾಗಿದ್ದು ಆ ಮಕ್ಕಳ ಎಳ್ಗೆ ಗೋಸ್ಕರ ದಿನಾಲು ಶಾಲೆಗೆ ಬರುವಿಕೆಗಾಗಿ ಮಕ್ಕಳಲ್ಲಿ ಶಾಲೆಯ ಮೇಲೆ ಆಕರ್ಷಿಸಲು ಬಗೆ–ಬಗೆಯ ತಿಂಡಿ ತಿನಿಸುಗಳು ಮಾಡಿಸಿ ಊಟಕ್ಕೆ ನೀಡುವುದರಿಂದ ಮಕ್ಕಳ ಹಾಜರಾತಿ ಸಂಖ್ಯೆ ಹೆಚ್ಚಳವಾಗಿದೆ ಎಂದು ಶಾಲೆಯ ಮುಖ್ಯ ಗುರುಗಳು ಎಸ್ ಬಿ ರಾವಜಿ ಅವರು ಹೇಳಿದರು. ಇದರಿಂದ ಕಲಿಕೆಯಲ್ಲಿ ಪ್ರಗತಿ ಹೊಂದಲು ಅನುಕೂಲವಾಗಿತ್ತಿದೆ ಎಂದರು.ಬಿ ಕೆ ಬಿರಾದಾರ, ಎಸ್ ಎ ಚಪ್ಪರಬಂದ, ಪಿ ಎಸ್ ಭಜಂತ್ರಿ, ಬಿ ಎಲ್ ಶಿವಶರಣ, ಪಿ ಬಿ ಕರತಮಳ, ಆರತಿ ಆಳೂರ, ಸುಜಾತ ಗಬಸಾವಳಗಿ, ಅರುಣ ಹೋಟಗಾರ, ಹಾಗೂ ಅಡುಗೆ ಸಿಬ್ಬಂದಿಗಳಾದ ಗಂಗಾಬಾಯಿ ಖೇಡ, ಶೀಲವಂತಿ ಕೋಕರೆ, ಮಲ್ಲಮ್ಮ ಸಿಂಗೆ, ಶ್ರೀದೇವಿ ಸುಬಾನಗೋಳ ಮತ್ತಿತರಿದ್ದರು.

**ತಾಲೂಕ ವರದಿಗಾರರು: ಶಿವಪ್ಪ. ಬಿ. ಹರಿಜನ. ಇಂಡಿ**

## ಮಾದಕ ವ್ಯಸನದಿಂದ ದೂರವಿರಿ: ಕಡಕಬಾವಿ

ಇಂಡಿ : ಮಾಧಕ ವ್ಯಸನ ಕೇವಲ ವ್ಯಕ್ತಿಯನ್ನಷ್ಟೇ ಹಾಳು ಮಾಡುವುದಿಲ್ಲ. ಕುಟುಂಬ ಹಾಗೂ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುತ್ತದೆ ಎಂದು ತಹಶೀಲ್ದಾರ ಬಿ.ಎಸ್. ಕಡಕಬಾವಿ ಹೇಳಿದರು.

ಪಟ್ಟಣದ ಮಿನಿ ವಿಧಾನ ಸೌಧದಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಘಟಕ, ವಿಜಯಪುರ ತಾಲೂಕು ಆರೋಗ್ಯ ಇಲಾಖೆಯ ಆಶ್ರಯದಲ್ಲಿ ನಡೆದ ಗುಲಾಬಿ ಆಂಧೋಲನ ಜಾಗ್ರತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇಂದಿನ ಶೇ.70 ರಷ್ಟು ಯುವ ಜನಾಂಗವು ಹಲವಾರು ದುಶ್ಚಟಗಳಿಗೆ ಮಾರು ಹೋಗುತ್ತಿದ್ದು, ತಮ್ಮ ಜೀವನವನ್ನೇ ಹಾಳು ಮಾಡಿ ಕೊಳ್ಳುತ್ತಿದ್ದಾರೆ. ಮಾದಕ ವ್ಯಸನದಿಂದಾಗುವ ಅನಾಹುತಗಳ ಬಗ್ಗೆ ಜಾಗೃತಿ ಮೂಡಿಸುವುದು ಅತೀ ಅವಶ್ಯಕವಾಗಿದೆ ಎಂದರು.ಮಾಧಕ ವಸ್ತುಗಳ ಸೇವನೆಯಿಂದ ಜೀವನ ಹಾಳಾಗುತ್ತದೆ. ಯುವ ಜನರು ವಿದ್ಯಾರ್ಥಿಗಳು ಸಮುದಾಯ ಮಾಧಕ ವ್ಯಸನಕ್ಕೆ ಬಲಿಯಾಗುತ್ತಿದ್ದು ಇದರಿಂದ ಮುಕ್ತಿ ನೀಡಿ ಅವರನ್ನು ಮುಖ್ಯ ವಾಹಿನಿಗೆ ತರುವ ಜವಾಬ್ದಾರಿ ನಮ್ಮೆಲ್ಲರದಾಗಿದೆ ಎಂದರು.

ಟಿಎಚ್‌ಓ ಡಾ. ಅರ್ಚನಾ ಕುಲಕರ್ಣಿ ,ತಾಲೂಕಾ ಆರೋಗ್ಯ ಶಿಕ್ಷಣಾಧಿಕಾರಿ ಸುನಂದಾ ಅಂಬಲಗಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಶಾಲೆ, ಕಾಲೇಜು ಸುತ್ತ ಮುತ್ತ ಪಾನ್ ಶಾಪಗಳಿಗೆ ಅಧಿಕಾರಿಗಳಿಂದ ಗುಲಾಬಿ ಹೂವು ನೀಡುವುದರ ಮುಖಾಂತರ ಜಾಗೃತಿ ಜಾಥಾ ಅರಿವು ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಕಾರ್ಯ ನಿರ್ವಾಹಕ ಅಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ ಚಿಕ್ಕಬೇನೂರ, ಆಡಳಿತ ವೈದ್ಯಾಧಿಕಾರಿಗಳು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು : ಶಿವಪ್ಪ ಬಿ. ಹರಿಜನ.**

## ಶ್ರೀ ವಿ.ಮ. ವಿ.ವ.ಸಂಘದ ಆರು ಸ್ಥಾನಗಳಿಗೆ ಡಿ.24ರಂದು ಚುನಾವಣೆ

ಇಳಕಲ್: ಉತ್ತರ ಕರ್ನಾಟಕದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಶ್ರೀ ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘದ ಕಾರ್ಯನಿರ್ವಾಹಕ ಮಂಡಳಿಯ ಆರು ಸದಸ್ಯರು ನಿವೃತ್ತರಾದ ಪ್ರಯುಕ್ತ ಡಿ.24 ರವಿವಾರದಂದು ಚುನಾವಣೆ ನಡೆಯಲಿದೆ ಎಂದು ಚುನಾವಣಾ ಅಧಿಕಾರಿ ಡಾ.ಎಸ್. ಎಸ್.ಅವಟೆ ಸಹಾಯಕ ಚುನಾವಣೆ ಅಧಿಕಾರಿ ಪ್ರೊ.ಕೆ. ಎಸ್ .ಗಾಣಿಗೇರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾಲಿ ಚೇರ್ಮನ್ ಎಂ .ವ್ಹಿ. ಪಾಟೀಲ, ಶರಣಪ್ಪ ಅಕ್ಕಿ,ಡಿ.ಎನ್, ದೇವಗಿರಿಕರ, ಅರುಣ ಎ. ಬಿಜ್ಜಲ, ಬಿ. ಎಂ. ಕಬ್ಬಿಣ, ಮತ್ತು ಪಿ.ಬಿ. ಸಪ್ಪಂಡಿ ಇವರುಗಳು ನಿವೃತ್ತರಾಗಲಿರುವ ಕಾರ್ಯನಿರ್ವಾಹಕ ಮಂಡಳಿಗೆ ಡಿಸೆಂಬರ್ 24 ರವಿವಾರ ಚುನಾವಣೆ ಜರುಗಲಿದೆ.

ಡಿ. 17 ರವಿವಾರದಿಂದ ಸಂಘದ ಕಾರ್ಯಾಲಯದಲ್ಲಿ ಚುನಾವಣಾ ಅಧಿಕಾರಿಗಳಿಂದ ಮುಂಜಾನೆ 11 ರಿಂದ ಮಧ್ಯಾಹ್ನ 2 ಗಂಟೆವರೆಗೆ ನಾಮಪತ್ರಗಳನ್ನು ಪಡೆಯಬಹುದು ಡಿ.20 ರಂದು ಬುಧವಾರ ನಾಮಪತ್ರ ಸಲ್ಲಿಸುವ ಕೊನೆಯ ದಿನ ಅಂದೇ ನಾಮಪತ್ರ ಪರಿಶೀಲಿಸಿ ಉಮೇದುವಾರರ ಹೆಸರನ್ನು ಪ್ರಕಟಿಸುವುದು ಡಿ. 21 ಗುರುವಾರ ಉಮೇದುವಾರಿಕೆಯನು ಹಿಂದಕ್ಕೆ ತೆಗೆದುಕೊಳ್ಳುವುದು, ಅಂದೆ ಸ್ಪರ್ಧಿಸಲು ಅರ್ಹ ಉಮೇದುವಾರರ ಹೆಸರುಗಳನ್ನು ಪ್ರಕಟಿಸಲಾಗುವುದು.

ಅವಶ್ಯಕತೆ ಬಿದ್ದಲ್ಲಿ ಡಿ.24 ರವಿವಾರ ಸಂಘದ ಕಾರ್ಯಾಲಯದಲ್ಲಿ ಮಧ್ಯಾಹ್ನ 2 ರಿಂದ ಸಂಜೆ 4ರವರೆಗೆ ಮತದಾನ ನಡೆಯುವುದು, ನಂತರ ಮತ ಎಣಿಕೆ ಮುಗಿದ ಮೇಲೆ ಚುನಾವಣಾ ಫಲಿತಾಂಶವನ್ನು ಘೋಷಣೆ ಮಾಡಲಾಗುವುದು ಎಂದು ಸಹಾಯಕ ಚುನಾವಣೆ ಅಧಿಕಾರಿ ಪ್ರೊ.ಬಿ.ಬಿ. ಸುಗ್ಗಮದ, ಡಾ.ರಮೇಶ ಮಾಳಗಿ ತಿಳಿಸಿದ್ದಾರೆ.

ಡಿ.24 ರವಿವಾರ ಸಂಜೆ 6 ಗಂಟೆಗೆ ಸಂಘದ ಘನ ಅಧ್ಯಕ್ಷರಾದ ಪೂಜ್ಯ ಗುರುಮಹಾಂತ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಂಘದ ಸಾಮಾನ್ಯ ಸಭೆಯನ್ನು ಎಸ್. ಆರ್ .ಕಂಠಿ ಶಿಕ್ಷಣ ಮಹಾವಿದ್ಯಾಲಯದ ಸಭಾಭವನದಲ್ಲಿ ಕರೆಯಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಅಶೋಕ ವಿ. ಬಿಜ್ಜಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹುಸೇನಬಿ ಇಮಾಮಸಾಬ ಕೊಪ್ಪದ ನಿಧನ



ಲೋಕಾಪೂರ: ಪಟ್ಟಣದ ನಿವಾಸಿ ಉದಯವಾಣಿ ಪತ್ರಿಕೆ ವರದಿಗಾರ ಸಲೀಮ ಐ. ಕೊಪ್ಪದ ಅವರ ತಾಯಿ ಹುಸೇನಬಿ ಇಮಾಮಸಾಬ ಕೊಪ್ಪದ (70) ಅವರು ಮಂಗಳವಾರ ರಾತ್ರಿ 10:30 ಗಂಟೆಗೆ ನಿಧನರಾದರು.

ಮೃತರು ಮೂರು ಜನ ಪುತ್ರರು, ಒಬ್ಬಳು ಪುತ್ರಿ, ಸೊಸೆಯಂದಿರು, ಮೊಮ್ಮಕಳು ಸೇರಿದಂತೆ ಅಪಾರ ಬಂಧುಬಳಗ ಅಗಲಿದ್ದಾರೆ.

## ಮಹಾದೇವಿ ಚನ್ನಬಸಯ್ಯ ಗೋವಿಂದಪೂರಮಠ ನಿಧನ

ಮುಧೋಳ: ಇಲ್ಲಿನ ಗೋವಿಂದ ಪುರಗಲ್ಲಿಯ ನಿವಾಸಿ ಶ್ರೀಮತಿ ಮಹಾದೇವಿ ಚನ್ನಬಸಯ್ಯ ಗೋವಿಂದಪುರಮಠ ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿ ಡಿಸೆಂಬರ್ ಆರರಂದು ಬೆಳಿಗ್ಗೆ ನಿಧನರಾದರು. ಮೃತರು ತಮ್ಮ ಹಿಂದೆ ಹೊಸದಿಗಂತ ಪತ್ರಿಕೆ ಪತ್ರಕರ್ತ ಮಲ್ಲಿಕಾರ್ಜುನ ಗೋವಿಂದಪುರಮಠ ಸೇರಿದಂತೆ ಓರ್ವ ಪುತ್ರ , ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಬಳಗ ಅಗಲಿದ್ದಾರೆ. ಮಹಾದೇವಿ ಅವರ ನಿಧನಕ್ಕೆ ಸಚಿವ ಆರ್. ಬಿ. ತಿಮ್ಮಾಪುರ, ಮಾಜಿ ಸಚಿವ ಗೋವಿಂದ ಕಾರಜೋಳ, ಮಾಜಿ ಸಚಿವ ಮುರುಗೇಶ ನಿರಾಣಿ, ಪ್ರಕಾಶ್ ವಸ್ತ್ರದ, ಕುಮಾರ್ ಮಠದ, ಮಹಾದೇವಯ್ಯ ವಸ್ತ್ರದ, ಕಾನಿಪ ಅಧ್ಯಕ್ಷ ರತ್ನಾಕರ ಶೆಟ್ಟಿ, ಅಶೋಕ ಕುಲಕರ್ಣಿ, ಗಣೇಶ ಮೇತ್ರಿ, ಎಂ. ಎಚ್. ನದಾಫ, ಶ್ರೀಶೈಲ ಆನದಿನ್ನಿ ಸೇರಿದಂತೆ ಸಂಘದ ಸದಸ್ಯರು ಶೋಕ ವ್ಯಕ್ತಪಡಿಸಿದ್ದಾರೆ. ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು 'ಧಡಲ್ ಬಾಜಿ'ಕನ್ನಡ ದಿನ ಪತ್ರಿಕೆ ಬಳಗದಿಂದ ಪ್ರಾರ್ಥಿಸುತ್ತೇವೆ.

## ಜೆಡಿಎಸ್ ಬ್ಲಾಕ್ ಅಧ್ಯಕ್ಷರಾಗಿ ಕಾಳಶೆಟ್ಟಿ ಆಯ್ಕೆ



ಮೂಡಲಗಿ : ಬೆಳಗಾವಿ ಜಿಲ್ಲಾ ಜನತಾದಳ (ಜಾತ್ಯಾತೀತ)ದ ಜಿಲ್ಲಾ ಅಧ್ಯಕ್ಷ ಹಾಗೂ ಬೆಳಗಾವಿ ವಿಭಾಗದ ಕೋರ್ ಕಮೀಟಿ ಸದಸ್ಯ ಶಂಕರ ಭ. ಮಾಡಲಗಿ ಅವರು ಮೂಡಲಗಿ ತಾಲೂಕಿನ ಅವರಾದಿ ಗ್ರಾಮದ ಪ್ರಕಾಶ ರಾಮಪ್ಪ ಕಾಳಶೆಟ್ಟಿ, ಇವರು ಸಮಾಜ ಸೇವೆಯಲ್ಲಿ ಹೆಚ್ಚಿನ ಆಸ್ತಿ ಹೊಂದಿರುವುದರಿಂದ ಪಕ್ಷದಲ್ಲಿ ಕಾರ್ಯ ನಿರ್ವಹಿಸಲು ಇಚ್ಛಾಸಕ್ತಿಯನ್ನು ಹೊಂದಿರುತ್ತಾರೆ. ಮಾಜಿ ಮುಖ್ಯ ಮಂತ್ರಿಗಳು ಹಾಗೂ ಶಾಸಕಾಂಗ ಪಕ್ಷದ ನಾಯಕ ಹಾಗೂ ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಇವರ ಆದೇಶದ ಮೇರೆಗೆ ಹಾಗೂ ಅವರ ಒಪ್ಪಿಗೆ ಪಡೆದು ಅರಭಾಂವಿ ವಿಧಾನಸಭಾ ಮತಕ್ಷೇತ್ರದ ಮೂಡಲಗಿ ತಾಲ್ಲೂಕಿನ ಬ್ಲಾಕ್ ಅಧ್ಯಕ್ಷರೆಂದು ನೇಮಕ ಮಾಡಲು ನಿರ್ದೇಶಿಸಿರುತ್ತಾರೆ. ಗುರುವಾರ ಬೆಳಗಾವಿಯ ಸುವರ್ಣಸೌದದಲ್ಲಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಕಾಳಶೆಟ್ಟಿಯವರಿಗೆ ಆದೇಶ ಪತ್ರವನ್ನು ನೀಡಿ ಶುಭ ಹಾರೈಸಿದರು,

ಮೇಲಿನವರ ನಿರ್ದೇಶನದನ್ವಯ ಮೂಡಲಗಿ ತಾಲೂಕಿನ ಅವರಾದಿ ಗ್ರಾಮದ ಪ್ರಕಾಶ ರಾಮಪ್ಪ ಕಾಳಶೆಟ್ಟಿ ಇವರನ್ನು ಅರಭಾಂವಿ ವಿಧಾನಸಭಾ ಮತಕ್ಷೇತ್ರದ ಮೂಡಲಗಿ ತಾಲ್ಲೂಕಿನ ಜೆ.ಡಿ.ಎಸ್. ಪಕ್ಷದ ಬ್ಲಾಕ್ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶಿಸಲಾಗಿದೆ. ಸದರಿಯವರು ಕ್ಷೇತ್ರದ ತುಂಬಾ ಸಂಚರಿಸಿ ಪಕ್ಷ ಸಂಘಟನೆ ಮಾಡಬೇಕೆಂದು ಮತ್ತು ಪಕ್ಷಕ್ಕೆ ಯಾವುದೇ ಚ್ಯುತಿ ಬರದಂತೆ ನಡೆದುಕೊಳ್ಳಬೇಕೆಂದು ಆದೇಶ ಪತ್ರದಲ್ಲಿ ತಿಳಿಸಿದ್ದಾರೆ,

# ಆನ್ಲೈನ್ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಎಚ್ಚರಿಕೆಯಿಂದ ವ್ಯವಹರಿಸಿ: ಜಿ.ವಿ. ಕಾಮತ



ಧಾರವಾಡ: ಸೈಬರ್ ಅಪರಾಧಗಳು ಇಂದಿನ ದಿನಗಳಲ್ಲಿ ಹೆಚ್ಚುತ್ತಿದ್ದು, ಆನ್ಲೈನ್ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಗ್ರಾಹಕರು ಎಚ್ಚರಿಕೆಯಿಂದ ವ್ಯವಹರಿಸಬೇಕು ಎಂದು ಕೆ.ವಿ.ಜಿ ಬ್ಯಾಂಕ್ ಮುಖ್ಯ ಶಾಖೆಯ ಮುಖ್ಯ ವ್ಯವಸ್ಥಾಪಕರಾದ ಜಿ.ವಿ ಕಾಮತ ತಿಳಿಸಿದರು.

ನಗರದ ಅಂಜುಮನ್ ಪದವಿ ಮಹಾವಿದ್ಯಾಲಯದಲ್ಲಿ ಆಯೋಜನೆ ಮಾಡಲಾಗಿದ್ದ ವಾಣಿಜ್ಯ ಬ್ಯಾಂಕುಗಳ ಸೇವೆಗಳು ಮತ್ತು ಉತ್ಪನ್ನಗಳ ಕುರಿತಾದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಓಇಈಖಿ, ಖಿಖಿಉ ಗಳು, ಹಣ ವರ್ಗಾವಣೆ, ಲಾಕರ್ ಸೌಲಭ್ಯಗಳು ಹಾಗೂ ಬ್ಯಾಂಕ್ ಗ್ರಾಹಕರಿಗೆ ನೀಡುವ ವಿವಿಧ ರೀತಿಯ ಉತ್ಪನ್ನಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡಿದ ಅವರು, ಬ್ಯಾಂಕ್ಗಳು ಒದಗಿಸುವ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಳ್ಳುವಂತೆ ವಿದ್ಯಾರ್ಥಿಗಳಿಗೆ ತಿಳಿಸಿದರು.

ಸೈಬರ್ ಅಪರಾಧಗಳು ಗರಿಷ್ಠ ಮಟ್ಟದಲ್ಲಿರುವುದರಿಂದ ಲೈನ್ ಬ್ಯಾಂಕಿಂಗ್ ಸೌಲಭ್ಯಗಳಲ್ಲಿ ಕಾರ್ಯನಿರ್ವಹಿಸುವಾಗ ಜಾಗರೂಕರಾಗಿರಿ ಎಂದು ಅವರು ವಿದ್ಯಾರ್ಥಿಗಳಿಗೆ ಎಚ್ಚರಿಕೆ ನೀಡಿದರು.

ಕ್ರೆಡಿಟ್ ಕಾರ್ಡ್ ಡೆಬಿಟ್ ಕಾರ್ಡ್ ಪ್ರೀ ಪೇಯ್ಡ್ ಕಾರ್ಡ್ಗಳಂತಹ ಗ್ರಾಹಕರಿಗೆ ಬ್ಯಾಂಕ್ ನೀಡುವ ವಿವಿಧ ಕಾರ್ಡ್ಗಳು ಮತ್ತು ಅವುಗಳ ವ್ಯತ್ಯಾಸಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ.ಎನ್.ಎಂ ಮಕಾಂದರ್ ಮಾತನಾಡಿ, ವಿದ್ಯಾರ್ಥಿಗಳಿಗೆ ಮುದ್ರಾ ಸಾಲ, ಶೈಕ್ಷಣಿಕ ಸಾಲ, ಗೃಹ ಸಾಲದ ಕುರಿತು ತಿಳಿಸಿ, ವಿದ್ಯಾರ್ಥಿಗಳು ಸಾಲ ಪಡೆದಾಗ ಪೂರ್ಣ ಸುಸ್ತಿದಾರರಾಗದಂತೆ ವಿದ್ಯಾರ್ಥಿಗಳಿಗೆ ತಿಳಿಸಿದರು. ಆರ್ಥಿಕ ಹಿಂಜರಿತದ ಸಂದರ್ಭದಲ್ಲಿ ಅಮೆರಿಕದ ಬ್ಯಾಂಕ್ಗಳ ಸಮಸ್ಯೆಗಳ ಉದಾಹರಣೆಯನ್ನೂ ಅವರು ನೀಡಿದರು. ನಾವು ನಿರ್ದಿಷ್ಟವಾಗಿ ಬ್ಯಾಂಕುಗಳನ್ನು ಮತ್ತು ಒಟ್ಟಾರೆಯಾಗಿ ಆರ್ಥಿಕತೆಯನ್ನು ಬಲಪಡಿಸಲು ಸಾಧ್ಯವಾಗುವಂತೆ ಮರುಪಾವತಿಯಲ್ಲಿ ಪ್ರಾಮಾಣಿಕವಾಗಿರಬೇಕು ಎಂದು ಅವರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ರಾಹತ ಉನ್ನಿಸಾ, ಐಕ್ಯೂಎಸ್ಸಿ ಕೋ ಆರ್ಡಿನೆಟರ್ ಎಂ.ಬಿ ನಲ್ವತ್ವಾಡ್, ಪತ್ರಿಕೋದ್ಯಮ ಮುಖ್ಯಸ್ಥ ಡಾ.ಎಸ್.ಎಸ್ ಅಧೋನಿ, ಉಪನ್ಯಾಸಕರಾದ ಡಾ.ಎಸ್ ಎಸ್ ಬಳ್ಳಾರಿ , ಆಸ್ಮಾ ನಧಾಫ್, ಮುಬಾರಕ್ ಮುಲ್ಲಾ ಸೇರಿದಂತೆ ಶಿಕ್ಷಕರು ಹಾಗೂ ಸಿಬ್ಬಂದಿಗಳು ಇದ್ದರು.

## ನಿಜಗುಣರು ನಾಡು ಕಂಡ ಶ್ರೇಷ್ಠ ತತ್ವಜ್ಞಾನಿ: ಶರಣ ದುಂಡಪ್ಪಣ್ಣ ಮೆಟಗುಡ್ಡ



ಮಹಾಲಿಂಗಪುರ : ಶ್ರೀಮನ್ ನಿಜಗುಣ ಶಿವಯೋಗಿಗಳು ನಮ್ಮ ನಾಡಿನ ಮುಕ್ತಿ ಪದ್ಧತಿ ಪ್ರತಿಪಾದಕರು ಹಾಗೂ ನಾಡು ಕಂಡ ಶ್ರೇಷ್ಠ ತತ್ವಜ್ಞಾನಿ ಎಂದು ಶರಣ ದುಂಡಪ್ಪ ಮೆಟಗುಡ್ಡ ಹೇಳಿದರು.

ಪಟ್ಟಣದ ನೀಲಕಂಠೇಶ್ವರ ಮಠದಲ್ಲಿ ಕುರುವಿನಶೆಟ್ಟಿ ಸಮಾಜದ ಆಶ್ರಯದಲ್ಲಿ ವಿಶ್ವ ಶಾಂತಿಗಾಗಿ ನಡೆದ ವೇದಾಂತ ಪರಿಷತ್ ಕಾರ್ಯಕ್ರಮದ ಸಮಾರೋಪ ಮತ್ತು ಶ್ರೀಮನ ನಿಜಗುಣ ಶಿವಯೋಗಿಗಳ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ ಗುರುವಿನಲ್ಲಿ ಯಾರಿಗೆ ಶ್ರದ್ಧೆ ಇರುತ್ತದೆಯೋ ಅವರಿಗೆ ಮಾತ್ರ ಜ್ಞಾನದ ಅರಿವು ಆಗುತ್ತದೆ. ಗುರುವಿನ ಗುಣಗಾನ ಮಾಡಿದವರಿಗೆ ಜೀವನಲ್ಲಿ ಮುಕ್ತಿ ಸಿಗುವುದು ಖಂಡಿತ, ಶಿವನಾಮ ಸ್ಮರಣೆಯಿಂದ ಮಾತ್ರ ಜೀವನ ಪಾವನ ಎಂದರು.

ಪ್ರವಚನಕಾರ ಕೋಲೂರಿನ ಕೃಷ್ಣಗೌಡ ಪಾಟೀಲ ಮಾತನಾಡಿ ಪ್ರವನ ಯಾವ ಕಾಲಕ್ಕೂ ಎಲ್ಲರಿಗಿಂತಲೂ ಗುರು ದೊಡ್ಡವನು, ಹರ ಮುನಿದರೆ ಗುರು ಕಾಯುವನು, ಗುರು ಮುನಿದರೆ ಹರ ಕಾಯಲಾರ, ಗುರುವಿನ ಉಪದೇಶ ಆಲಿಸಿ-ಪಾಲಿಸಬೇಕು. ಶಿವಾ ತಮ್ಮನ್ನು ಕರುಣೆ ತೋರಿ ನೋಡಬೇಕು, ನಿಜಗುಣರು ನಾಡಿನ ಬಹು ದೊಡ್ಡ ಜ್ಞಾನಿ ಅಗಿದ್ದರು ಎಂದರು.

ಗಣ್ಯರಾದ ಮಹದೇವಪ್ಪ ಬರಗಿ, ಎಂ.ಎಸ್ ಮುಗಳಖೋಡ, ರವಿ ಮುಂಡಗನೂರ, ಮನೋಹರ ಶಿರೋಳ, ಸುದರ್ಶನ ಸುಣಧೋಳಿ, ಶಿವಪ್ಪ ಮೂಡಲಗಿ, ಮಹಾಲಿಂಗಪ್ಪ ಮುಗಳಖೊಡ, ಮಹಾಲಿಂಗಪ್ಪ ಕಲ್ಲೊಳ್ಳಿ, ಸುರೇಶ ಗೋಲಭಾಂವಿ, ಶ್ರೀಮಂತ ಹಳ್ಳಿ,ಚೇತನ ಹುಣಶ್ಯಾಳ, ಗಿರಮಲ್ಲ ಬರಗಿ, ಈರಪ್ಪ ಚುನಮುರಿ, ಬಸವರಾಜ ಅರಳಿಕಟ್ಟಿ, ಸುರೇಶ ಗೋಲಭಾಂವಿ, ಗೊಲೇಶ ಅಮ್ಮಣಗಿ, ಶಿವಾನಂದ ಹುಣಶ್ಯಾಳ. ಪ್ರಕಾಶ ಮರೆಗುದ್ದಿ, ರಾಜು ಮುಗಳಖೊಡ, ಶಿವರುದ್ರ ಮುಂಡಗನೂರ, ಶಂಕ್ರಪ್ಪ ಹಣಗಂಡಿ, ಮುರಿಗೆಪ್ಪಾ ಮುಗಳಖೊಡ, ಬಸವರಾಜ ಮುಗಳಖೋಡ, ಶಿವಶಂಕರ ಮೂಡಲಗಿ, ಈರಪ್ಪ ಜಿಡ್ಡಿಮನಿ, ಹೊಳೆಪ್ಪ ಬಾಡಗಿ, ಈರಪ್ಪ ನಾಗರಾಳ, ರಮೇಶ ಗೋಲಭಾಂವಿ, ಶಾರದಾ ಮುಂಡಗನೂರ, ಲಲಿತಾ ಗೋಲಭಾಂವಿ, ಜ್ಯೋತಿ ಹುಲಕುಂದ ಸೇರಿದಂತೆ ಹಲವರು ಇದ್ದರು.

ಈಶ್ವರಪ್ಪಾ ಮುಂಡಗನೂರ ಪ್ರಾರ್ಥಿಸಿದರು.ಎಂ.ಆರ್ ತೇರದಾಳ ಸ್ವಾಗತಿಸಿದರು.ಈರಣ್ಣ ಹಲಗತ್ತಿ ನಿರೂಪಿಸಿದರು.

## ಡಾ.ಬಿ.ಅಂಬೇಡ್ಕರ್ ಅವರ ಪರಿನಿರ್ವಾಣ ದಿನ



ವಿಜಯಪುರ : ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಪರಿನಿರ್ವಾಣ ನಿಮಿತ್ಯ ಶಿವಣಗಿ ಗ್ರಾಮದ ಡಾ. ಬಿ. ಆರ್. ಅಂಬೇಡ್ಕರ್ ನಗರ ವೃತ್ತದಲ್ಲಿ ರಾತ್ರಿ ವೇಳೆಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಮೇಣದ ಬತ್ತಿ ಬೆಳಕಿನಿಂದ ಗೌರವ ಸಮರ್ಪಿಸಿ ಮೌನಾಚರಣೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಸುಭಾಸ ಮಿಲ್ತ್ರಿ, ಸುನೀಲ ಹೊಸಮನಿ, ಹುಸನಪ್ಪ ಆಲಗೂರ, ಹಣಮಂತ ನಡುವಿನಮನಿ, ಜಾನಪ್ಪ ನಿಡೋಣಿ, ವಿಶ್ವನಾಥ ದೊಡಮನಿ, ಶ್ರೀಮಂತ ದೊಡಮನಿ, ಸಂಜು ಮಿಲ್ತ್ರಿ ಸೇರಿದಂತೆ ಗುರು ಹಿರಿಯರು, ಸಮಾಜದ ಜನತೆ, ಮಕ್ಕಳು ಭಾಗವಹಿಸಿದ್ದರು.

# ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ



ವಿಜಯಪುರ : ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ ಆಚರಿಸಲಾಯಿತು.

ಜಿಲ್ಲಾಧಿಕಾರಿ ಟಿ. ಭೂಬಾಲನ್ ಅವರು ಈ ಸಂದರ್ಭದಲ್ಲಿ ಸಶಸ್ತ್ರ ಪಡೆಗಳ ಸಾಂಕೇತಿಕ ಧ್ವಜ ಬಿಡುಗಡೆಗೊಳಿಸಿ, ನಂತರ ಸಾಂಕೇತಿಕವಾಗಿ ಧ್ವಜ ಸ್ವೀಕರಿಸಿ, ದೇಣಿಗೆ ನೀಡುವುದರ ಮೂಲಕ ಸಾರ್ವಜನಿಕರಿಗೆ ಧ್ವಜಗಳನ್ನು ಮಾರಾಟ ಮಾಡಿ ದೇಣಿಗೆ ಸಂಗ್ರಹಿಸುವ ಕಾರ್ಯಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆಯನ್ನು ದೇಶದ ಎಲ್ಲ ಭಾಗಗಳಲ್ಲಿ ಪ್ರತಿ ವರ್ಷ ಡಿಸೆಂಬರ ಏಳರಂದು ಆಚರಿಸಲಾಗುತ್ತಿದೆ. ಸಶಸ್ತ್ರ ಪಡೆಗಳ ಧ್ವಜ ಬಿಡುಗಡೆ ಮಾಡಲಾಗುತ್ತದೆ. ಕೃತಜ್ಞತೆ ಸಲ್ಲಿಸಲು ಹಾಗೂ ಬೆಂಬಲ ವ್ಯಕ್ತಪಡಿಸಲು ಧ್ವಜ ದಿನಾಚರಣೆ ಒಂದು ಸದಾವಕಾಶ ಒದಗಿಸಿ ಕೊಡುತ್ತದೆ. ವೀರ ಯೋಧರ ಕುಟುಂಬಕ್ಕೆ ಬೆಂಬಲ ಒದಗಿಸಲು ಈ ದಿನಾಚರಣೆ ವೇದಿಕೆ. ಈ ನಿಧಿಯನ್ನು ಯುದ್ಧ ಸಂತ್ರಸ್ತರಿಗೆ,ಮಾಜಿ ಸೈನಿಕರು ಮತ್ತು ಅವರ ಅವಲಂಬಿತರ ಸಲುವಾಗಿ ಹಮ್ಮಿಕೊಂಡ ವಿವಿಧ ಕಲ್ಯಾಣ ಮತ್ತು ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗುತ್ತಿದೆ.

ಜಿಲ್ಲಾ ಮಟ್ಟದಲ್ಲಿ ಸೈನಿಕ ಕಲ್ಯಾಣ ಇಲಾಖೆಯು ಕಾರ್ಯ ನಿರ್ವಹಿಸುತ್ತಿದೆ. ಜಿಲ್ಲೆಯ ಮಾಜಿ ಸೈನಿಕರು ಹಾಗೂ ಅವರ ಅವಲಂಬಿತರ ಕುಟುಂಬಗಳಿಗೆ ಬಹಳಷ್ಟು ಕೆಲಸ ನಿರ್ವಹಿಸುತ್ತಿದೆ. ಮುಂಬರುವ ದಿನಗಳಲ್ಲಿ ಯೋಧರ ಹಾಗೂ ಅವರ ಕುಟುಂಬದ ದೃಷ್ಟಿಯಿಂದ ಇನ್ನೂ ರಚನಾತ್ಮಕವಾಗಿ ಕಾರ್ಯ ನಿರ್ವಹಿಸಬೇಕಾಗಿದೆ. ಸೇವಾನಿರತರು ಹಾಗೂ ನಿವೃತ್ತ ಯೋಧರು ಹಾಗೂ ಅವರ ಅವಲಂಬಿತ ಕುಟುಂಬಕ್ಕೆ ಸಮಸ್ಯೆ ಉಂಟಾದರೆ, ಅಧಿಕಾರಿ ಸಿಬ್ಬಂದಿ ತಕ್ಷಣ ಸ್ಪಂದಿಸಬೇಕು. ಸಾರ್ವಜನಿಕರು ಧ್ವಜ ಖರೀದಿಸುವ ಮೂಲಕ ದೇಶದ ಸೈನಿಕರಿಗೆ ಬೆಂಬಲಿಸಬೇಕು ಎಂದು ಅವರು ಹೇಳಿದರು.

ಜಿಲ್ಲೆಯು 2022 ನೇ ಸಾಲಿನ ಸಶಸ್ತ್ರ ಪಡೆಗಳ ಧ್ವಜ ನಿಧಿಗೆ ನಿಗದಿಪಡಿಸಲಾದ ಗುರಿ ಸಾಧಿಸಿರುವುದರಿಂದ ಈ ನಿಧಿಯು ಮಾಜಿ ಸೈನಿಕರು ಮತ್ತು ಅವರ ಅವಲಂಬಿತರ ಕಲ್ಯಾಣ ಕಾರ್ಯಕ್ರಮಗಳಿಗೆ ಅಮೂಲ್ಯ ನೆರವು ನೀಡಲಿದ್ದು , ಜಿಲ್ಲೆಯ ಕೊಡುಗೆಯನ್ನು ಪ್ರಶಂಸಿಸುವ ಉದ್ದೇಶದಿಂದ ಪ್ರೋತ್ಸಾಹಕರ ಪಾರಿತೋಷಕಕ್ಕೆ ಜಿಲ್ಲೆಯು ಭಾಜನವಾಗಿದ್ದು ಹೆಮ್ಮೆ ಮೂಡಿಸುತ್ತಿದೆ ಎಂದರು.

ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ ಅವರು ಮಾತನಾಡಿ, ಮಾಜಿ ಸೈನಿಕರು ಮತ್ತು ಅವರ ಅವಲಂಬಿತರ ಸಲುವಾಗಿ ಹಮ್ಮಿಕೊಳ್ಳುವ ವಿವಿಧ ಕಲ್ಯಾಣ ಮತ್ತು ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳಿಗೆ ಸಾರ್ವಜನಿಕರು ಧ್ವಜವನ್ನು ಹೆಚ್ಚೆಚ್ಚು ಖರೀದಿಸುವ ಮೂಲಕ ಕೈ ಜೋಡಿಸಬೇಕು ಎಂದು ಅವರು ಹೇಳಿದರು.

ಸೈನಿಕ ಶಾಲೆಯ ಪ್ರಾಂಶುಪಾಲರು ಗ್ರೂಪ್ ಕ್ಯಾಪ್ಟನ್ ಪ್ರತಿಭಾ ಬಿ. ಕರ್ನಲ್ ಭೀಮಾಶಂಕರ್ ಹಿಪ್ಪರಗಿ, ಸೈನಿಕ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಶ್ರೀಮತಿ ಜಿ. ಆರ್. ವಿನೂತ, ಮಾಜಿ ಸುಬೇದಾರ ಕ್ಯಾಪ್ಟನ್ ಸೂರ್ಯವಂಶಿ, ಶೇಗುಣಸಿ, ಲೆಫ್ಟಿನೆಂಟ್ ಎಂ. ಸುಭಾನಿ, ಆಯಾ ಇಲಾಖೆಯ ಡಾ. ಆರ್. ಎಸ್. ಪಾಟೀಲ್ ಸೇರಿದಂತೆ ಇತರೆ ಮಾಜಿ ಸೈನಿಕರು ಜಿಲ್ಲಾಧಿಕಾರಿ ಕಚೇರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ವಿಧಾನಸಭೆಯಲ್ಲಿ 2 ವಿಧೇಯಕಗಳ ಮಂಡನೆ

ಬೆಳಗಾವಿ : ಬೆಳಗಾವಿ ಸುವರ್ಣಸೌಧದಲ್ಲಿ ಬುಧವಾರ ನಡೆದ ವಿಧಾನಸಭೆಯಲ್ಲಿ 2 ಪ್ರಮುಖ ವಿಧೇಯಕಗಳನ್ನು ಮಂಡಿಸಲಾಯಿತು.

2023ನೇ ಸಾಲಿನ ಕರ್ನಾಟಕ ಸರಕು ಸೇವೆಗಳ ತೆರಿಗೆ (2ನೇಯ ತಿದ್ದುಪಡಿ) ವಿಧೇಯಕವನ್ನು ಮತ್ತು 2023 ನೇ ಸಾಲಿನ ಕರ್ನಾಟಕ ಸಾರ್ವಜನಿಕ ಪರೀಕ್ಷೆ (ನೇಮಕಾತಿಯಲ್ಲಿನ ಭ್ರಷ್ಟಾಚಾರ ಮತ್ತು ಅನುಚಿತ ವಿಧಾನಗಳ ಪ್ರತಿಬಂಧಕ ಕ್ರಮಗಳು) ವಿಧೇಯಕವನ್ನು ಮುಖ್ಯ ಮಂತ್ರಿ ಹಾಗೂ ಗೃಹ ಸಚಿವರ ಪರವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರು ಸದನದಲ್ಲಿ ಮಂಡಿಸಿದರು. ಈ ವಿಧೇಯಕಗಳು ಅಧಿವೇಶನದಲ್ಲಿ ಚರ್ಚೆಗೆ ಬರಲಿವೆ.

## 2024 ರಲ್ಲಿ ಕಿತ್ತೂರ ರಾಷ್ಟ್ರೀಯ ವಿಜಯೋತ್ಸವ ಆಚರಿಸಲು ಕಡಾಡಿ ಮನವಿ




ಮೂಡಲಗಿ : ಕಿತ್ತೂರು ರಾಣಿ ಚನ್ನಮ್ಮ 1824ರಲ್ಲಿ ಬ್ರೀಟಿಷರ್ ವಿರುದ್ಧ ಮೊದಲ ಯುದ್ಧ ಗೆದ್ದು 2024ಕ್ಕೆ 200ನೇ ವರ್ಷದ ವಿಜಯೋತ್ಸವವನ್ನು ರಾಷ್ಟ್ರೀಯ ಉತ್ಸವವಾಗಿ ಆಚರಿಸಬೇಕು ಮತ್ತು 200ನೇ ವಿಜಯೋತ್ಸವದ ಸವಿನೆನಪಿಗಾಗಿ ಬೆಳಗಾವಿ ವಿಮಾನ ನಿಲ್ದಾಣಕ್ಕೆ ಕಿತ್ತೂರು ರಾಣಿ ಚನ್ನಮ್ಮ ವಿಮಾನ ನಿಲ್ದಾಣ ಎಂದು ನಾಮಕರಣ ಮಾಡಬೇಕು ಜೊತೆಗೆ ಚನ್ನಮ್ಮಾಜಿ ಸ್ಮರಣಾರ್ಥ ನಾಣ್ಯ ಮತ್ತು ಅಂಚೆ ಚೀಟಿಗಳನ್ನು ಬಿಡುಗಡೆ ಮಾಡುವಂತೆ ಸಂಸತ್ತಿನ ಚಳಿಗಾಲದ ಅಧಿವೇಶನದ ಶೂನ್ಯ ವೇಳೆಯಲ್ಲಿ ರಾಜ್ಯ ಸಭಾ ಸಂಸದ ಈರಣ್ಣ ಕಡಾಡಿ ಅವರು ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು.

ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಲಕ್ಷಾಂತರ ಜನ ಭಾಗವಹಿಸಿರುವುದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಅಂತಹ ಹೋರಾಟಗಾರರಲ್ಲಿ ಕರ್ನಾಟಕದ ಮಹಿಳೆಯೋರ್ವಳು 1824ರಲ್ಲೇ ಸೂರ್ಯ ಮುಳಗದ ಬ್ರಿಟಿಷ್ ಸಾಮ್ರಾಜ್ಯದ ಎದುರು ಯುದ್ಧ ನಡೆಸಿ ಬ್ರೀಟಿಷ ಅಧಿಕಾರಿ ಥ್ಯಾಕರೆಯ ಹತ್ಯೆಗೈಯುವ ಮೂಲಕ ಸ್ವಾತಂತ್ರ್ಯ ಸಂಗ್ರಾಮದ ಬೆಳ್ಳಿ ಚುಕ್ಕಿಯಾಗಿ ಗುರುತಿಸಲ್ಪಟ್ಟಿದ್ದಾರೆ. ಅವರೆ ನಮ್ಮ ಕನ್ನಡ ನಾಡಿನ ವೀರ ವನಿತೆ ಕಿತ್ತೂರು ರಾಣಿ ಚನ್ನಮ್ಮ. ಅವರೇ ಸ್ವಾತಂತ್ರ್ಯ ಹೋರಾಟದ ಮೊದಲ ಭಾರತೀಯ ಮಹಿಳೆಯಾಗಿದ್ದಾರೆ ಎಂದರು.

ಚನ್ನಮ್ಮಾಜೀ ಕರ್ನಾಟಕದ ಬೆಳಗಾವಿ ಜಿಲ್ಲೆಯ ಕಾಕತಿಯಲ್ಲಿ ಜನ್ಮತಾಳಿದರು. ಚೆನ್ನಮ್ಮ, ಕಿತ್ತೂರಿನ ರಾಜ ಮಲ್ಲಸರ್ಜ ದೇಸಾಯಿಯನ್ನು ಮದುವೆಯಾಗಿದರು. ಪತಿಯ ಮರಣಾನಂತರ ಸಂಸ್ಥಾನದ ಪಟ್ಟಕ್ಕೆ ದತ್ತಕ ಪುತ್ರನನ್ನು ತೆಗೆದುಕೊಳ್ಳಲು ವಿರೋಧಿಸಿದ ಬ್ರೀಟಿಷರ್ ವಿರುದ್ಧ ಯುದ್ಧ ಸಾರಿದ ವೀರವನಿತೆ ಅವಳು. ಈ ಯುದ್ದದ ಸಮಯದಲ್ಲಿ ರಾಣಿ ಚನ್ನಮ್ಮನ ಸೈನಿಕರು ಬ್ರಿಟಿಷ್ ಅಧಿಕಾರಿಗಳು ಮತ್ತು ಅವರ ಕುಟುಂಬದವರನ್ನು ಒತ್ತೆಯಾಳಾಗಿ ಹಿಡಿದಿಟ್ಟುಕೊಂಡಿದ್ದು ಇತಿಹಾಸವೇ ಸರಿ. ತದನಂತರ ಬ್ರಿಟಿಷ್ರೊಂದಿಗಿನ ಮಾತುಕತೆಯ ಫಲವಾಗಿ ಆ ಅಧಿಕಾರಿಗಳನ್ನು ಹಾಗೂ ಅವರ ಕುಟುಂಬಗಳನ್ನು ಅತ್ಯಂತ ಗೌರವಯುತವಾಗಿ ಬಿಡುಗಡೆ ಮಾಡುವ ಮೂಲಕ ಕಿತ್ತೂರು ಸಂಸ್ಥಾನದ ಘನತೆಯನ್ನು ಎತ್ತಿಹಿಡಿದ್ದಿದ್ದಾರೆ ಎಂದು ಸಂಸದ ರಾಜ್ಯಸಭೆಯಲ್ಲಿ ಹೇಳಿದ್ದಾರೆ.

ಯುದ್ಧದಲ್ಲಿ ಸೋಲಾದ ಹಿನ್ನಲೆಯಲ್ಲಿ ಆ ಸೋಲಿನ ಸೇಡು ತೀರಿಸಿಕೊಳ್ಳಲು ಬ್ರಿಟಿಷರು ಕಿತ್ತೂರಿನ ಮೇಲೆ ಪದೇ ಪದೇ ದಾಳಿ ಮಾಡುತ್ತಲೇ ಇದ್ದರು. ಒಂದು ಬಾರಿ 12 ದಿನಗಳ ಕಾಲ ಚನ್ನಮ್ಮ ಮತ್ತು ಕಿತ್ತೂರಿನ ಸೈನ್ಯ ತಮ್ಮ ಕೋಟೆಯನ್ನು ರಕ್ಷಿಸಲು ಬ್ರಿಟಿಷರೊಂದಿಗೆ ನಿರಂತರವಾಗಿ ಹೋರಾಡಿದರು. ಈ ಹೋರಾಟದಲ್ಲಿ ಬ್ರಿಟಿಷ್ ಸೈನ್ಯವು ರಾಣಿ ಚನ್ನಮ್ಮನನ್ನು ಕುತಂತ್ರದಿಂದ ಬಂಧಿಸುವಲ್ಲಿ ಯಶಸ್ವಿಯಾಯಿತು. ರಾಣಿ ಚನ್ನಮ್ಮಾಜಿ ಬ್ರಿಟಿಷರ್ ವಿರುದ್ದದ ಮೊದಲನೆಯ ಯುದ್ದದಲ್ಲಿ ಗೆದ್ದು ಮತ್ತೊಂದು ಬಾರಿ ಯುದ್ದದಲ್ಲಿ ಗೆಲ್ಲಲು ಸಾಧ್ಯವಾಗದಿದ್ದರು ಕೂಡಾ ಬ್ರಿಟಿಷರ ವಿರುದ್ಧ ಹೋರಾಡಲು ಹೆದರುತ್ತಿದ್ದ ಆ ಕಾಲದಲ್ಲಿ ಒಬ್ಬ ಮಹಿಳೆಯೋರ್ವಳು ದಿಟ್ಟತನದಿಂದ ಹೋರಾಟ ಮಾಡಿರುವುದು ನಮ್ಮ ನಾಡಿನ ಸ್ವಾತಂತ್ರ್ಯ ಹೋರಾಟಗಾರರಿಗೆ ಪ್ರೇರಣೆಯಾಯಿತು ಎಂದು ಸಂಸದರು ಮಾತನಾಡಿದ್ದಾರೆ.

ಸ್ವಾತಂತ್ರ್ಯಾನಂತರ ಅಂದಿನ ಮುಖ್ಯಮಂತ್ರಿ ಬಂಗಾರಪ್ಪನವರ ಸರ್ಕಾರದ ಅವಧಿಯಲ್ಲಿ ಈ ಇತಿಹಾಸವನ್ನು ಯಾರು ಮರೆಯಬಾರದು ಎಂಬ ಕಾರಣದಿಂದ ಕಿತ್ತೂರು ಉತ್ಸವವನ್ನು ಪ್ರಾರಂಭಿಸಿದರು. ಮೊದಲು ಕಿತ್ತೂರಿಗೆ ಸೀಮಿತವಾಗಿದ್ದ ಉತ್ಸವ ನಂತರ ತಾಲೂಕಾ ಮಟ್ಟಕ್ಕೆ ವಿಸ್ತರಣೆಯಾಗಿ, ಆ ಮೇಲೆ ಜಿಲ್ಲಾಮಟ್ಟದ ಉತ್ಸವವಾಗಿ ಬೆಳೆದುನಿಂತಿತು. ಈಗ ಅದು ರಾಜ್ಯ ಮಟ್ಟದ ಉತ್ಸವವಾಗಿ ಕನಾಟಕದಲ್ಲಿ ಮನೆ ಮಾತಾಗಿದೆ. ಚನ್ನಮ್ಮನ ಗತವೈಭವದ ಇತಿಹಾಸಕ್ಕೆ ಬೆಳಕು ಚೆಲ್ಲುವಂತಹ ಮತ್ತು ಕೋಟೆಯನ್ನು ಪುನರ್ ಅಭಿವೃದ್ದಿ ಮಾಡುವಂತ ಕೆಲಸಗಳು ನಡೆಯುತ್ತಿವೆ. 2007ರಲ್ಲಿ ಅಂದಿನ ರಾಷ್ಟ್ರಪತಿ ಶ್ರೀಮತಿ ಪ್ರತಿಭಾ ಪಾಟೀಲ್ ಅವರು ಸಂಸತ್ತಿನ ಆವರಣದಲ್ಲಿ ರಾಣಿ ಚೆನ್ನಮ್ಮನ ಪ್ರತಿಮೆಯನ್ನು ಅನಾವರಣಗೊಳಿಸುವ ಮೂಲಕ ಕಿತ್ತೂರು ರಾಣಿ ಚೆನ್ನಮ್ಮನಿಗೆ ಗೌರವ ಸಲ್ಲಿಸಿದ್ದಾರೆ. ಆ ಮೂಲಕ ದೇಶದ ಸ್ವಾತಂತ್ರ ಹೋರಾಟಕ್ಕಾಗಿ ತ್ಯಾಗ, ಬಲಿದಾನಗೈದ ಮಹನೀಯರಿಗೆ ಗೌರವ ನೀಡಿದಂತಾಗುತ್ತದೆ. ಈ ಕುರಿತು ಅಗತ್ಯಕ್ರಮ ಜಾರಿಗೊಳಿಸಬೇಕಾಗಿ ಕರ್ನಾಟಕದ ಜನತೆಯ ಪರವಾಗಿ ಅತ್ಯಂತ ವಿನಮ್ರವಾಗಿ ಸರ್ಕಾರವನ್ನು ಒತ್ತಾಯಿಸಿದರು.

# ಉಚಿತ ಆರೋಗ್ಯ ಶಿಬಿರದ ಸಮಾರೋಪ
## ರಕ್ತದಾನ ಮಾಡಿ ಜೀವ ಉಳಿಸಿ: ಚನಬಸು ಹುರಕಡ್ಲಿ



ಮಹಾಲಿಂಗಪುರ: ಆರೋಗ್ಯವಂತ ಪ್ರತಿಯೊಬ್ಬ ವ್ಯಕ್ತಿಯು ರಕ್ತದಾನ ಮಾಡುವ ಮೂಲಕ ಇನ್ನೊಬ್ಬರ ಜೀವ ಉಳಿಸುವ ಕೆಲಸ ಮಾಡಬೇಕೆಂದು ಪುರಸಭೆ ಮಾಜಿ ಉಪಾಧ್ಯಕ್ಷ ಚನಬಸು ಹುರಕಡ್ಲಿ ಹೇಳಿದರು.

ಗುರುವಾರ ಸಂಜೆ ಸಿದ್ಧಾರೂಢ ಬ್ರಹ್ಮ ವಿದ್ಯಾಶ್ರಮದಲ್ಲಿ ಜರುಗಿದ ಹುರಕಡ್ಲಿ ಫೌಂಡೇಶನ್ ಉಚಿತ ಆರೋಗ್ಯ ಶಿಬಿರದ ಸಮಾರೋಪದಲ್ಲಿ ಮಾತನಾಡಿದ ಅವರು ಸಮಾಜ ಸೇವೆ ಮಾಡುವುದು ಮನುಷ್ಯನಿಗೆ ದೇವರು ನೀಡಿದ ಉತ್ತಮ ಅವಕಾಶ. ನಮ್ಮ ತಂದೆ ತಾಯಿ ಸ್ಮರಣಾರ್ಥ ಕಳೆದ 15 ವರ್ಷಗಳಿಂದ ಆರೋಗ್ಯ ಶಿಬಿರ ನಡೆಸುತ್ತಿದ್ದೇನೆ. ಉಳ್ಳವರು ಇಲ್ಲದವರಿಗಾಗಿ ಇಂತಹ ಆರೋಗ್ಯ ಶಿಬಿರಗಳನ್ನು ಆಯೋಜಿಸಿ ಅನುಕೂಲ ಕಲ್ಪಿಸಬೇಕು ಎಂದರು.

ಬಾಗಲಕೋಟೆಯ ದಂತ ಮಹಾವಿದ್ಯಾಲಯದ ಡಾ.ಮಹಾದೇವ ಹಿರೇಮಠ ಮಾತನಾಡಿ, ಎರಡು ದಿನಗಳ ಕಾಲ ಬೃಹತ್ ಆರೋಗ್ಯ ಶಿಬಿರ ಆಯೋಜಿಸಿ ಸಾರ್ವಜನಿಕರಿಗೆ ಉಪಯೋಗ ಕಲ್ಪಿಸಿದ ಸಿ.ಎಂ.ಹುರಕಡ್ಲಿ ಫೌಂಡೇಶನ್ ಕಾರ್ಯ ಶ್ಲಾಘನೀಯ ಎಂದರು.

ಕ್ರೀಡಾಸಾಧಕ ಆಕಾಶ ಗೌಂಡಿ ಹಾಗೂ ಪುರಸಭೆ ಮಾಜಿ ಉಪಾಧ್ಯಕ್ಷ ಚನಬಸು ಹುರಕಡ್ಲಿ, ಸದಸ್ಯೆ ಸವಿತಾ ಹುರಕಡ್ಲಿ ದಂಪತಿಯನ್ನು ಸನ್ಮಾನಿಸಲಾಯಿತು. ಎರಡನೇ ದಿನವೂ 25ಕ್ಕೂ ಅಧಿಕ ಜನರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು.

ಚಂದ್ರು ಗೊಂದಿ, ವಿಜಯ ಕುಳ್ಳೊಳ್ಳಿ, ಬಸವರಾಜ ರಾಯರ, ರವಿ ಜವಳಗಿ, ಬಿ.ಪಿ.ಚೋಪಡೆ, ಸಂಜು ಬಾರಕೋಲ, ಅಶ್ವಿನ ಪಟೇಲರಮಣಿ, ಮಹಾನಂದಾ ಗುಣಾರಿ, ಅರುಣಾ ಮೊಕಾಶಿ, ಸುನೀಲ ಕನಕರೆಡ್ಡಿ, ಮಹಾಂತೇಶ ಪಾತ್ರೋಟ, ವಿಜಯ ಸಬಕಾಳೆ, ರಾಜು ಮರೆಗುದ್ದಿ, ಸಿದ್ದು ಧಡೂತಿ, ವಿನೋದ ಶಿಂಪಿ, ಚಂದ್ರಶೇಖರ ಮೋರೆ, ಸೋಮಶೇಖರ ಮರೆಗುದ್ದಿ ಸೇರಿದಂತೆ ಹಲವರು ಇದ್ದರು.

ಉಚಿತವಾಗಿ ದಂತ ಚಿಕಿತ್ಸೆ, ಸೊಂಟ, ಬೆನ್ನು, ಕೈ-ಕಾಲು ನೋವಿಗೆ ಉಚಿತ ಮಸಾಜ್ ಚಿಕಿತ್ಸೆ ಹಾಗೂ ಕಿವಿ, ಮೂಗು, ಗಂಟಲು ತಪಾಸಣೆ ನಡೆಯಿತು. 200ಕ್ಕೂ ಹೆಚ್ಚು ಜನ ಶಿಬಿರದ ಪ್ರಯೋಜನ ಪಡೆದುಕೊಂಡರು.

## ತರಬೇತಿ ಕಾರ್ಯಾಗಾರದ ಸದುಪಯೋಗ ಪಡಿಸಿಕೊಳ್ಳಿರಿ: ಸಿ.ಆರ್.ಓಣಿ



ಬಾಗಲಕೋಟೆ: ತರಬೇತಿಯ ಸದುಪಯೋಗ ಪಡೆದು ವಿಕಲ ಚೇತನ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಶ್ರಮಿಸಬೇಕು ಎಂದು ಸಮಗ್ರ ಶಿಕ್ಷಣ ಕರ್ನಾಟಕ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿ ಸಿ.ಆರ್.ಓಣಿ ಹೇಳಿದರು.

ಅವರು ವಿದ್ಯಾಗಿರಿ ಬಿ.ಆರ್.ಸಿ. ಕೇಂದ್ರದಲ್ಲಿ ಶಾಲಾ ಶಿಕ್ಷಣ ಇಲಾಖೆ, ಸಮಗ್ರ ಶಿಕ್ಷಣ ಕರ್ನಾಟಕ, ಫೋರ್ಥ ವೇವ್ ಫೌಂಡೇಶನ್ ಸಹಯೋಗದಲ್ಲಿ ಹಮದಮಿಕೊಂಡಿದ್ದ ಸಮನ್ವಯ ಶಿಕ್ಷಣ ಸಂಪನ್ಮೂಲ ವ್ಯಕ್ತಿಗಳಿಗೆ ಎರಡು ದಿನಗಳ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು. 21 ವಿಕಲಚೇತನ ಮಕ್ಕಳಿಗೆ ಇರುವ ಸಮಸ್ಯೆಗಳು, ಪರಿಹಾರ, ಅವಶ್ಯಕ ಕೌಶಲಗಳನ್ನು ಪಡೆದು ಮಕ್ಕಳ ಕಲಿಕೆಗೆ ಸಹಾಯಕವಾಗಬೇಕು. ವಿಕಲಚೇತನ ಮಕ್ಕಳನ್ನು ಶಾಲಾ ಸಿದ್ದತಾ ಕೇಂದ್ರಗಳಿಗೆ ಕರೆ ತಂದು ಶೈಕ್ಷಣಿಕ ಮುಖ್ಯವಾಹಿನಿಗೆ ತರಬೇಕು ಎಂದು ಸಲಹೆ ನೀಡಿದರು. ಸಹಾಯಕ ಸಮನ್ವಯಾಧಿಕಾರಿ ಎಸ್.ಕೆ.ಕಲ್ಲೂರ, ಕ್ಷೇತ್ರ ಸಮನ್ವಯಾಧಿಕಾರಿ ಎಚ್.ಕೆ.ಗೂಡೂರ ಮಾತನಾಡಿದರು. ವೇದಿಕೆಯ ಮೇಲೆ ಬೀಳಗಿ ಕ್ಷೇತ್ರ ಸಮನ್ವಯಾಧಿಕಾರಿ ಶಿವಾಜಿ ಕಾಂಬಳೆ, ತಾಂತ್ರಿಕ ಸಹಾಯಕ ಚೌಧರಿ, ಸಂಪನ್ಮೂಲ ವ್ಯಕ್ತಿ ಅಂಜನಾದೇವಿ ಹಾಜರಿದ್ದರು. ಸಂಯೋಜಕ ಬಸವರಾಜ ವ್ಯಾಗೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಿ.ಎಂ.ಮಂತ್ರಿ ಸ್ವಾಗತಿಸಿದರು. ಎಂ.ಎಸ್. ದಿವಾಣಿ ಕಾರ್ಯಕ್ರಮ ನಿರೂಪಿಸಿದರು.

ಎಸ್.ಎಂ. ಬೆಣ್ಣೂರ ವಂದಿಸಿದರು.

ಕಾರ್ಯಾಗಾರದಲ್ಲಿ ಜಿಲ್ಲೆಯ ಎಲ್ಲ ತಾಲೂಕಿನ ಸಮನ್ವಯ ಶಿಕ್ಷಣ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿದ್ದರು.

### ಆಯುಷ್ ಪಂಚಕರ್ಮ ಆಸ್ಪತ್ರೆಗೆ ಭೇಟಿ: ಪರಿಶೀಲನೆ

# ಮಾದರಿ ಪಂಚಕರ್ಮ ಘಟಕವನ್ನಾಗಿಸಲು ಶ್ರಮ ವಹಿಸಿ ಕಾರ್ಯನಿರ್ವಹಿಸಿ: ಜಿ.ಪಂ. ಸಿಇಓ ರಾಹುಲ್ ಶಿಂಧೆ



ವಿಜಯಪುರ : ವಿಜಯಪುರದ ಆಯುಷ್ ಪಂಚಕರ್ಮ ಘಟಕವು ಇತರ ಘಟಕಗಳಿಗೆ ಮಾದರಿಯಾಗಬೇಕು ಆ ನಿಟ್ಟಿನಲ್ಲಿ ಎಲ್ಲರೂ ಹೆಚ್ಚಿನ ಶ್ರಮ ವಹಿಸಿ ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ ಸೂಚಿಸಿದರು.

ಗುರುವಾರ ವಿಜಯಪುರದ ಆಯುಷ್ ಹೈಟೆಕ್ ಪಂಚಕರ್ಮ ಆಸ್ಪತ್ರೆಗೆ ಅನಿರೀಕ್ಷಿತ ಭೇಟಿ ಪರಿಶೀಲನೆ ನಡೆಸಿದ ಅವರು, ಆಯುಷ್ ಘಟಕ ಕಾರ್ಯನಿರ್ವಹಿಸುತ್ತಿರುವ ಕುರಿತು ಹಾಗೂ ಈ ಘಟಕದಲ್ಲಿ ದೊರೆಯುವ ಸೌಲಭ್ಯಗಳ ಕುರಿತು ವಿವಿಧ ಐಇಸಿ ಚಟುವಟಿಕೆಗಳ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಬೇಕು. ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು, ಸಿಬ್ಬಂದಿಗಳು ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸಿ, ಗ್ರಾಮೀಣ ಭಾಗದಿಂದ ಬರುವ ಸಾರ್ವಜನಿಕರಿಗೆ ಯಾವದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಗ್ರಾಮೀಣ ಭಾಗದಲ್ಲಿ ಆರೋಗ್ಯ ಶಿಬಿರಗಳನ್ನು, ಮನೆ ಮದ್ದು ಕಾರ್ಯಕ್ರಮಗಳನ್ನು ಮತ್ತು ಯೋಗ ಶಿಬಿರಗಳನ್ನು ಆಯೋಜನೆ ಮಾಡುವ ಮೂಲಕ ಮಾದರಿ ಆಯುಷ್ ಘಟಕವನ್ನಾಗಿಸಲು ಕ್ರಮ ವಹಿಸುವಂತೆ ಅವರು ಸೂಚನೆ ನೀಡಿದರು.

ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳ ಮಾಹಿತಿ, ಆಸ್ಪತ್ರೆಯ ಕೆಲಸದ ಸಮಯ, ಈ ಆಸ್ಪತ್ರೆಯಲ್ಲಿ ದೊರಕುವ ಆಯುಷ್ ಚಿಕಿತ್ಸಾ ಸೌಲಭ್ಯಗಳ ಕುರಿತು ಮಾಹಿತಿ ಫಲಕ ಅಳವಡಿಸಬೇಕು. ಘಟಕಕ್ಕೆ ಬರುವ ಸಾರ್ವಜನಿಕರಿಗೆ ಮತ್ತು ರೋಗಿಗಳಿಗೆ ಶುದ್ಧ ಕುಡಿಯುವ ನೀರಿನ ಘಟಕ ಅಳವಡಿಸಲು ಹಾಗೂ ಹೆಚ್ಚಿನ ಆಸನದ ವ್ಯವಸ್ಥೆಗೆ ಕ್ರಮ ಕೈಗೊಳ್ಳಬೇಕು. ಆಸ್ಪತ್ರೆಯ ಮುಂದುಗಡೆ ಖಾಲಿ ಇರುವ ಸ್ಥಳದಲ್ಲಿ ಔಷಧಿಯುಕ್ತ ಸಸಿಗಳನ್ನು ನೆಟ್ಟು ಸುಂದರ ಉದ್ಯಾನವನ ನಿರ್ಮಿಸುವಂತೆ ಸೂಚಿಸಿದ ಅವರು, ಮಸಾಜಿಸ್ಟ್ ಸಿಬ್ಬಂದಿಗಳನ್ನು ತರಬೇತಿಗಾಗಿ ಕೇರಳಕ್ಕೆ ಕಳುಹಿಸಲು ಸಲಹೆ ನೀಡಿ, ಅದಕ್ಕೆ ಬೇಕಾದ ಸಹಕಾರ ನೀಡುವುದಾಗಿ ತಿಳಿಸಿದರು.

ಆಸ್ಪತ್ರೆಗೆ ಬರುವ ಸಾರ್ವಜನಿಕರ, ರೋಗಿಗಳ ಅನುಕೂಲಕ್ಕಾಗಿ ನಗರ ಸಾರಿಗೆ ಬಸ್ ಗಳು ಆಸ್ಪತ್ರೆಯ ವರೆಗೆ ಬರುವ ವ್ಯವಸ್ಥೆ ಮಾಡಲು ಸಂಬಂಧಪಟ್ಟವರೊಡನೆ ಸಂಪರ್ಕಿಸಿ ವ್ಯವಸ್ಥೆ ಕಲ್ಪಿಸಲು ಸ್ಥಳದಲ್ಲಿದ್ದ ಡಾ.ರಾಮನಗೌಡ.ಎಸ್.ಪಾಟೀಲ, ಜಿಲ್ಲಾ ಆಯುಷ್ ಅಧಿಕಾರಿಗಳು ಇವರಿಗೆ ಸೂಚಿಸಿದರು.

ಈ ಆಸ್ಪತ್ರೆಗೆ ಪ್ರತಿ ದಿನ ಸರಾಸರಿ 100ಕ್ಕು ಅಧಿಕ ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯಲು ಆಗಮಿಸುತ್ತಿದ್ದಾರೆ. ಈ ಆಸ್ಪತ್ರೆಯಲ್ಲಿ ವಿರೇಚನ, ಕಟಿಬಸ್ತಿ, ಶಿರೋಧಾರ ಮಸಾಜ್ ಥೆರಪಿ ಮತ್ತು ಸ್ಟೀಮ್ ಥೆರಪಿ ಸೇರಿ ವಿವಿಧ ಚಿಕಿತ್ಸೆಗಳನ್ನು ನೀಡಲಾಗುತ್ತಿದೆ ಜೊತೆಗೆ ಗ್ರಾಮೀಣ ಭಾಗಗಳಲ್ಲಿ ಆರೋಗ್ಯ ಶಿಬಿರಗಳನ್ನು ಆಯೋಜಿಸಿ, ಸಾರ್ವಜನಿಕರಿಗೆ ಆಯುರ್ವೇದ ಪದ್ಧತಿಯ ಅರಿವು ಮೂಡಿಸಲಾಗುತ್ತಿದೆ ಎಂದು ಡಾ.ರಾಮನಗೌಡ.ಎಸ್.ಪಾಟೀಲ, ಜಿಲ್ಲಾ ಆಯುಷ್ ಅಧಿಕಾರಿಗಳು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಅಲ್ಪಸಂಖ್ಯಾತರಿಂದ ಸಮುದಾಯ ಆಧಾರಿತ ತರಬೇತಿ ಯೋಜನೆಯಡಿ ಅರ್ಜಿ ಆಹ್ವಾನ

ವಿಜಯಪುರ : ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ 2023-24ನೇ ಸಾಲಿನಲ್ಲಿ ಅನುಷ್ಠಾನೊಳಿಸುತತಿರುವ ಸಮುದಾಯ ಆಧಾರಿತ ತರಬೇತಿ ಯೋಜನೆಯಡಿ ತರಬೇತಿ ಸೌಲಭ್ಯಕ್ಕಾಗಿ ಅಲ್ಪಸಂಖ್ಯಾತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಲ್ಪಸಂಖ್ಯಾತ ಸಮುದಾಯದ ನಿರುದ್ಯೋಗ ಯುವಕ-ಯುವತಿಯರಿಗೆ ಸ್ವಯಂ ಉದ್ಯೋಗ, ಕಛೇರಿ, ಕಂಪನಿ, ಕಾರ್ಖಾನೆಗಳಲ್ಲಿ ಉದ್ಯೋಗ ದೊರಕಿಸಲು ಈ ಯೋಜನೆಯಡಿ ಬ್ಯೂಟಿ ಪಾರ್ಲರ್ (ಪುರುಷ ಮತ್ತು ಮಹಿಳೆಯರಿಗೆ) ಪ್ರಮಾಣೀಕರಣ ಕೋರ್ಸ್, ಹೆವಿ ಅರ್ಥ ಮೂವರ್ (ಜೆಸಿಬಿ, ಕ್ರೇನ್, ಪೋಕ್ ಲೇನ್ ಸೇರಿದಂತೆ ಭಾರಿ ವಾಹನ ಚಾಲನಾ ತರಬೇತಿ) ತರಬೇತಿ, ಶಾರ್ಟ ಹ್ಯಾಂಡ್ ಟ್ರೈನಿಂಗ್, ಭದ್ರತಾ ಸೇವೆಗಳ ತರಬೇತಿ, ಆಫೀಸ್ ಅಡ್ಮಿನಿಸ್ಟ್ರೇಶನ್ ಮತ್ತು ರಿಟೈಲ್ ಮಾರ್ಕೆಟಿಂಗ್ ತರಬೇತಿ ನೀಡಲಾಗುವುದು.

ಅರ್ಹ ಆಸಕ್ತ ಅಭ್ಯರ್ಥಿಗಳು ವೆಬ್‌ಸೈಟ್ https://kmdconline.karnataka.gov.in/portal/home ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ದಿನಾಂಕ : 15-12-2023 ಕೊನೆಯ ದಿನಾಂಕವಾಗಿದೆ. ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ನೂತನ ಉದ್ಯಮ ಯಶಸ್ಸಿಗೆ ಎಲ್ಲರ ಸಹಕಾರ ಮುಖ್ಯ: ಶ್ರೀಗಳು



ಮುದ್ದೇಬಿಹಾಳ: ನೂತನ ಉದ್ಯಮ ಯಶಸ್ಸಿಗೆ ಎಲ್ಲರ ಸಹಕಾರ ಮುಖ್ಯವಾಗಿದೆ ಎಂದು ಸರೂರು ಹಾಲುಮತ ಮೂಲ ಗುರುಪೀಠ ಮತ್ತು ಅಗತೀರ್ಥ ಶಾಖಾ ಮಠದ ರೇವಣಸಿದ್ದೇಶ್ವರ ಶಾಂತಮಯ ಮಹಾಸ್ವಾಮಿಯವರು ನುಡಿದರು. ಇಲ್ಲಿನ ಹುಡ್ಕೋದ ಉದ್ಯಮಿ ಎಂ.ಎನ್.ಮದರಿ ಅವರ ಭವ್ಯ ಕಟ್ಟಡದಲ್ಲಿ ಪ್ರಾರಂಭಗೊಂಡಿರುವ ಮಂಗಳೂರು ಮೂಲದ ಪಂಜುರ್ಲಿ ಹೊಟೇಲ್ ಅನ್ನು ರಿಬ್ಬನ್ ಕತ್ತರಿಸುವ ಮೂಲಕ ಬುಧವಾರ ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು. ಮದರಿಯವರು ಈ ಭಾಗದಲ್ಲಿ ಜನಪರ ಕಾರ್ಯಗಳನ್ನು ನಡೆಸುವ ಮೂಲಕ ಹೆಸರಾಗಿದ್ದಾರೆ. ಅವರ ಮಾಲಿಕತ್ವದ ಕಟ್ಟಡದಲ್ಲಿ ಸಾರ್ವಜನಿಕರಿಗೆ ಉತ್ತಮ ಗುಣಮಟ್ಟದ ಹೊಟೇಲ್ ಒದಗಿಸಿ ಅನುಕೂಲ ಮಾಡಿಕೊಟ್ಟಿದ್ದಾರೆ. ತನ್ಮೂಲಕ ಮದರಿ ಅವರು ಹೊಟೇಲ್ ಉದ್ಯಮ ಬೆಳೆಯಲು ಪ್ರೋತ್ಸಾಹಿಸಿದಂತಾಗಿದೆ. ಈ ನೂತನ ಉದ್ಯಮ ಯಶಸ್ವಿಯಾಗಲಿ ಎಂದು ಶುಭ ಕೋರಿದರು. ಖಿಲಾರಹಟ್ಟಿಯ ಕಾಡಸಿದ್ದೇಶ್ವರ ಮಠದ ರಾಮಾನಂದ ಮಹಾರಾಜರು ಸಾನಿಧ್ಯ ವಹಿಸಿದ್ದರು. ತಾಲೂಕು ಕುರುಬರ ಸಂಘದ ಅಧ್ಯಕ್ಷರೂ ಆಗಿರುವ ಅಹಲ್ಯಾದೇವಿ ಹೋಳ್ಕರ್ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಎಂ.ಎನ್.ಮದರಿ, ಪಿಕಾರ್ಡ ಬ್ಯಾಂಕ್ ಅಧ್ಯಕ್ಷ ಬಿ.ಕೆ.ಬಿರಾದಾರ, ದಿ ಕರ್ನಾಟಕ ಕೋ ಆಪ್ ಬ್ಯಾಂಕ್ ಅಧ್ಯಕ್ಷ ಸತೀಶ ಓಸ್ವಲ್, ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಪ್ರಭುದೇವ ಕಲಬುರ್ಗಿ, ಗಣ್ಯರಾದ ಭೀಮಶೆಪ್ಪ ಮದರಿ, ವಾಸುದೇವ ಶಾಸ್ತ್ರಿ, ದಿ ಕರ್ನಾಟಕ ಕೋ ಆಪ್ ಬ್ಯಾಂಕ್ ಮಾಜಿ ಅಧ್ಯಕ್ಷ ಸಂಗನಗೌಡ ಬಿರಾದಾರ (ಜಟಿಸಿ), ಪಂಜುರ್ಲಿ ಹೊಟೇಲ್‌ನ ವಿಜಯ್ ಪೂಜಾರಿ, ವಿವೇಕ ಪೂಜಾರಿ, ಅಹಲ್ಯಾದೇವಿ ಹೋಳ್ಕರ್ ಗ್ರಾಮೀಣಾಭಿವೃದ್ಧಿ ಸೊಸೈಟಿ, ಅಹಲ್ಯಾದೇವಿ ಹೋಳ್ಕರ್ ಶಿಕ್ಷಣ ಸಂಸ್ಥೆ ಸೇರಿ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಪಾಲ್ಗೊಂಡು ನೂತನ ಉದ್ಯಮಕ್ಕೆ ಶುಭ ಹಾರೈಸಿದರು.

# ಅಂತಾರಾಷ್ಟ್ರೀಯ ಮಟ್ಟದ "ಜಿಲ್ಲಾ ಕ್ರೀಡಾಂಗಣ" ನಿರ್ಮಾಣಕ್ಕೆ ಕ್ರಮ ಯೋಜನೆ ರೂಪಿಸಲು ಅಧಿಕಾರಿಗಳಿಗೆ ಸೂಚನೆ: ಸಚಿವ ಬಿ.ನಾಗೇಂದ್ರ



ಬೆಳಗಾವಿ : ಜಿಲ್ಲೆಯಲ್ಲಿ ಅತಿ ಹೆಚ್ಚು ವಿಸ್ತೀರ್ಣದ ಜಿಲ್ಲಾ ಕ್ರೀಡಾಂಗಣ ನಿರ್ಮಾಣಕ್ಕಾಗಿ ಸಾರ್ವಜನಿಕರಿಂದ ಬೇಡಿಕೆ ಇದೆ. ಕ್ರೀಡಾ ಪಟುಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶದ ಹೆಸರು ಪ್ರತಿನಿಧಿಸುತ್ತಾರೆ. ಆದ್ದರಿಂದ ಕ್ರೀಡಾ ಪಟುಗಳಿಗೆ ಅನುಕೂಲವಾಗುವಂತೆ ನೂತನ ಜಿಲ್ಲಾ ಕ್ರೀಡಾಂಗಣ ನಿರ್ಮಾಣಕ್ಕೆ ಯೋಜನೆ ರೂಪಿಸಬೇಕು ಎಂದು ಯುವ ಸಬಲೀಕರಣ, ಕ್ರೀಡಾ ಇಲಾಖೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಸಚಿವ ಬಿ.ನಾಗೇಂದ್ರ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬೆಳಗಾವಿಯ ರಾಮತೀರ್ಥ ನಗರದಲ್ಲಿ (ಕೆ.ಇ.ಬಿ.) ಗ್ರಿಡ್ ಹತ್ತಿರ ಗುರುವಾರ (ಡಿ.07) ನೂತನ "ಜಿಲ್ಲಾ ಕ್ರೀಡಾಂಗಣ" ನಿರ್ಮಿಸಲು ಪ್ರಸ್ತಾಪಿಸಿರುವ ಜಾಗೆಯನ್ನು ಪರಿವೀಕ್ಷಿಸಿ, ಅವರು ಮಾತನಾಡಿದರು.

ಜಿಲ್ಲಾಡಳಿತ ಹಾಗೂ ಸಂಬಂಧಿಸಿದ ಇಲಾಖೆಯಿಂದ ಕ್ರೀಡಾಂಗಣ ನಿರ್ಮಾಣಕ್ಕೆ ಈಗ ಗುರುತಿಸಿರುವ ಸ್ಥಳ ಸೂಕ್ತವಾಗಿದೆ. ನಿರ್ಮಾಣಕ್ಕೆ ಅಗತ್ಯವಿರುವ ಯೋಜನೆ ರೂಪಿಸಿ, ಜಿಲ್ಲಾ ಉಸ್ತುವಾರಿ ಸಚಿವರ ಜೊತೆ ಚರ್ಚಿಸಿದ ಬಳಿಕ ಕ್ರೀಡಾಂಗಣ ನಿರ್ಮಾಣಕ್ಕೆ ಕ್ರಮ ವಹಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲೆಯಲ್ಲಿ ಅತಿ ಹೆಚ್ಚು ಕ್ರೀಡಾ ಪಟುಗಳಿದ್ದಾರೆ. ಈ ಕ್ರೀಡಾಂಗಣ ನಿರ್ಮಾಣದಿಂದ ಯುವ ಕ್ರೀಡಾ ಪಟುಗಳಿಗೆ ಬಹಳಷ್ಟು ಅನುಕೂಲವಾಗಲಿದೆ.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಈಗಾಗಲೇ ಕ್ರೀಡಾಂಗಣ ನಿರ್ಮಾಣಕ್ಕೆ 9 ಎಕರೆ 20 ಗುಂಟೆ ಸ್ಥಳ ನೀಡಿದ್ದಾರೆ.

ಸದರಿ ಸರ್ವೆ ನಂಬರ್ ಒಳಪಡುವ ಇನ್ನೂ 6 ಎಕರೆ ಜಾಗೆಯಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲು ಸ್ಥಳ ಗುರುತಿಸಬೇಕು ಎಂದು ಕ್ರೀಡಾ ಇಲಾಖೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಸಚಿವ ಬಿ.ನಾಗೇಂದ್ರ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಬೆಳಗಾವಿ ಉತ್ತರ ವಿಧಾನ ಸಭಾ ಮತ ಕ್ಷೇತ್ರದ ಶಾಸಕ ಆಸೀಫ್ (ರಾಜು) ಸೇಠ್, ಮಹಾನಗರ ಪಾಲಿಕೆ ಆಯುಕ್ತ ಅಶೋಕ ದುಡಗುಂಟಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಉಪ ನಿರ್ದೇಶಕ ಬಿ. ಶ್ರೀನಿವಾಸ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಬಸವರಾಜ ಕುರಿಹುಲಿ, ಹಾಗೂ ಮತ್ತಿತರ ಅಧಿಕಾರಿಗಳು ಹಾಜರಿದ್ದರು.

# ಅಧ್ಯಾತ್ಮದಿಂದ ಸರ್ವ ರೋಗಗಳು ದೂರ: ಡಾ. ಕೋಮಲ್ ದಲಾಲ



ಬೆಳಗಾವಿ : ಅಧ್ಯಾತ್ಮದಿಂದ ಸರ್ವ ರೋಗಗಳು ದೂರವಾಗುತ್ತವೆ. ಹೀಗಾಗಿ ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಧ್ಯಾತ್ಮ ಸಾಧನೆಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಮುಂಬೈ (ಠಾಣೆಯ) ಅಧ್ಯಾತ್ಮ ಕೇಂದ್ರ ಭಕ್ತಿ ವೇದಾಂತ ಆಸ್ಪತ್ರೆ ಪ್ರಾಧ್ಯಾಪಕರಾದ ಶ್ರೀಮತಿ ಡಾ ಕೋಮಲ್ ದಲಾಲ್ ಅವರು ಹೇಳಿದರು.

ಅವರು ಸಿದ್ದರಾಮೇಶ್ವರ ಶಿಕ್ಷಣ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳ ಸಮಾವೇಶದಲ್ಲಿ ತಮಗೆ ಕೊಡಮಾಡಲಾದ "ಆತ್ಮ ಸ್ವಾಸ್ಥ್ಯ ಶ್ರೀ" ಪ್ರಶಸ್ತಿ ಸ್ವೀಕರಿಸಿ ಮಾತನಾಡುತ್ತಿದ್ದರು.ದೈಹಿಕ ಮಾತ್ರವಲ್ಲ ಮಾನಸಿಕ ರೂಪದಲ್ಲಿ ಸ್ವಸ್ಥವಾಗಿದ್ದಾಗ ಮಾತ್ರ ಆತ ಸಂಪೂರ್ಣ ಆರೋಗ್ಯವಂತನೆಂದು ಹೇಳಬಹುದು ನಮ್ಮ ಜೀವನದಲ್ಲಿ ನಾವು ಕನಿಷ್ಠ ತತ್ವಗಳನ್ನು ಪಾಲಿಸಲೇಬೇಕು ಇಲ್ಲದೆ ಹೋದಲ್ಲಿ ಕಷ್ಟಗಳು ತಪ್ಪಿದ್ದಲ್ಲ ಅತ್ಯಂತ ಗಂಭೀರ ಪ್ರಮಾಣದ ರೋಗಗಳನ್ನು ಕೂಡ ಅಧ್ಯಾತ್ಮ ಸಾಧನೆಯಿಂದ ಮತ್ತು ನಿರಂತರ ಮಂತ್ರಗಳ ಶ್ರವಣದಿಂದ ಗುಣಪಡಿಸಲು ಸಾಧ್ಯ ಎಂಬುದನ್ನು ತಮ್ಮ ಆಸ್ಪತ್ರೆಯಲ್ಲಿ ಹಲವಾರು ರೋಗಿಗಳ ಮೇಲೆ ಪ್ರಯೋಗ ಮಾಡಿ ಯಶಸ್ವಿಯಾಗಿ ಅವರನ್ನು ಗುಣಪಡಿಸಲಾಗಿದೆ ಎಂದು ಅವರು ಉದಾಹರಣೆ ಸಹಿತ ವಿವರಿಸಿದರು.

ಅಧಿಕ ರಕ್ತದ ಒತ್ತಡ ಮತ್ತು ಅಧಿಕ ಸಕ್ಕರೆ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಿಗೆ ಅಲ್ಲದೆ ಡಿಪ್ರೆಶನ್ ಗೆ ಒಳಗಾದ ರೋಗಿಗಳಿಗೆ ನಿರಂತರವಾಗಿ ಮಂತ್ರಗಳ ಶ್ರವಣದಿಂದ ಅತ್ಯಂತ ಕಡಿಮೆ ಸಮಯದಲ್ಲಿ ಸಂಪೂರ್ಣವಾಗಿ ಗುಣಮುಖರನ್ನಾಗಿ ಮಾಡಲಾಗಿದೆ ಅಲ್ಲದೆ ಕ್ಯಾನ್ಸರ್ ನಂತೆ ಅತ್ಯಂತ ಗಂಭೀರ ಕಾಯಿಲೆಯಿಂದ ಬಳಲುತ್ತಿರುವವರು ಮಾನಸಿಕವಾಗಿ ಸಂಪೂರ್ಣವಾಗಿ ಕುಗ್ಗಿ ಹೋದವರು ಜೀವನದಲ್ಲಿ ಎಲ್ಲಾ ಆಸೆಗಳನ್ನು ಕಳೆದುಕೊಂಡು ಹತಾಶರಾದವರನ್ನು ಅಧ್ಯಾತ್ಮಿಕ ಉಪಚಾರದಿಂದ ಗುಣಪಡಿಸಿ ಯಶಸ್ವಿಯಾಗಿದೆ ಎಂದ ಅವರು ಎಲ್ಲದಕ್ಕೂ ಶ್ರದ್ಧೆ ಮತ್ತು ವಿಶ್ವಾಸ ಬಹಳ ಮುಖ್ಯವಾಗಿದೆ ನಾನು ನಾನು ಎನ್ನುವುದನ್ನು ಬಿಡಬೇಕು ಅಹಂಕಾರದಿಂದ ದೂರವಾಗಿ ದೇವರ ಅಸ್ತಿತ್ವ ಇದೆ ಆತ ನಮಗೆ ಸಹಾಯ ಮಾಡುತ್ತಾನೆ ಎನ್ನುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು, ಆಗ ಅಧ್ಯಾತ್ಮದಿಂದ ಖಂಡಿತವಾಗಿ ಆರೋಗ್ಯ ಸಂಬಂಧಿ, ಮಾನಸಿಕ ಸಂಬಂಧಿ ಮತ್ತು ಸಾಮಾಜಿಕ ಸಂಬಂಧಿ ಉತ್ತಮ ಪರಿಹಾರ ಮತ್ತು ಫಲಿತಾಂಶ ಸಿಕ್ಕೇ ಸಿಗುತ್ತದೆ ಎಂದು ಹೇಳಿದರು.

ಅನಗತ್ಯವಾಗಿ ವಿಚಾರಗಳನ್ನು ಮಾಡುತ್ತಾ ನಾವು ಅತಿಯಾದ ಆಸೆಗಳನ್ನು ಇಟ್ಟುಕೊಂಡು ದುಃಖಿಗಳಾಗಿದ್ದೇವೆ ಮಾನವ ಜನ್ಮ ವಿಶಿಷ್ಟವಾದದ್ದು ಕೆಲವು ಬಾರಿ ಸನ್ಮಾರ್ಗದಲ್ಲಿ ನಡೆಯದೆ ಪ್ರಾಣಿಗಳಿಗಿಂತ ಕೆಟ್ಟದಾಗಿ ವರ್ತಿಸುತ್ತೇವೆ ಇದೇ ಕಾರಣದಿಂದ ನಿದ್ದೆ ಇಲ್ಲದೆ ಸಮಾಧಾನವಿಲ್ಲದೆ ದುಃಖಿಗಳಾಗಿರುತ್ತೇವೆ, ಖಿನ್ನತೆಗೆ ಒಳಗಾಗಿ ಆತ್ಮಹತ್ಯೆಯತ್ತ ಮುಖ ಮಾಡಿದ ಅಸಂಖ್ಯ ಉದಾಹರಣೆಗಳಿವೆ ಇದಕ್ಕೆಲ್ಲ ಒಂದೇ ಮಾರ್ಗ ಅದು ಅಧ್ಯಾತ್ಮ ಸಾಧನೆ, ಪ್ರಕೃತಿಯು ಪಶು ಪ್ರಾಣಿಗಳಿಂದ ಹಿಡಿದು ಮನುಷ್ಯನವರೆಗೆ ಎಲ್ಲರಿಗೂ ಸ್ವರಕ್ಷಣಾತ್ಮಕ ಅನುಕೂಲಗಳನ್ನು ನೀಡಿದೆ ಅದರಲ್ಲೂ ಮನುಷ್ಯನಿಗೆ ವಿಶಿಷ್ಟವಾದ ವಿಚಾರ ಶಕ್ತಿಯನ್ನು ಬಲವನ್ನು ನೀಡಿದೆ ಅದರ ಸದುಪಯೋಗವಾಗಬೇಕು ದಯೆ ಕರುಣೆ ಅಧ್ಯಾತ್ಮ ನಡೆ ನುಡಿಗಳನ್ನು ಅನುಸರಿಸಿಕೊಂಡು ಹೋಗಬೇಕು ಇಷ್ಟ ದೈವದ ಆರಾಧನೆಯ ಮೂಲಕ ಅಧ್ಯಾತ್ಮದ ಸಾಧನೆ ಮಾಡಬೇಕು ಅಂದಾಗ ಜೀವನ ಅತ್ಯಂತ ಸುಖವಾಗಿರುತ್ತದೆ ಎಂದವರು ಹೇಳಿದರು.

ಕಾರ್ಯಕ್ರಮದ ಸಾನಿಧ್ಯವನ್ನು ಅರಭಾವಿ-ಕಡೋಲಿಯ ದುರದುಂಡೇಶ್ವರ ಸಿದ್ಧ ಸಂಸ್ಥಾನ ಮಠದ ಶ್ರೀ.ಗುರುಬಸವಲಿಂಗ ಮಹಾಸ್ವಾಮಿಗಳು ವಹಿಸಿ ಆಶೀರ್ವಚನ ನೀಡಿದರು, ಸಮಾರಂಭದ ನೇತೃತ್ವವನ್ನು ಅಥಣಿಯ ಮೋಟಗಿಮಠದ ಶ್ರೀ.ಪ್ರಭು ಚನ್ನಬಸವ ಮಹಾಸ್ವಾಮಿಗಳು ವಹಿಸಿದ್ದರು, ಸಮ್ಮುಖದಲ್ಲಿ ರಾವೂರ್ ವಿರಕ್ತ ಮಠದ ಶ್ರೀ.ಸಿದ್ದಲಿಂಗ ಮಹಾಸ್ವಾಮಿಗಳು ಮತ್ತು ನಾಗನೂರು ರುದ್ರಾಕ್ಷಿ ಮಠದ ಪೀಠಾಧಿಕಾರಿ ಡಾ.ಅಲ್ಲಮಪ್ರಭು ಮಹಾಸ್ವಾಮಿಗಳು ಉಪಸ್ಥಿತರಿದ್ದರು.ಅಧ್ಯಕ್ಷತೆಯನ್ನು ನಾಗನೂರು ರುದ್ರಾಕ್ಷಿ ಮಠದ ಪ್ರಸಾದ ನಿಲಯಗಳ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಬಸವರಾಜ ರೊಟ್ಟಿ ವಹಿಸಿದ್ದರು.

"ಆತ್ಮ ಸ್ವಾಸ್ಥ್ಯ ಶ್ರೀ ಪ್ರಶಸ್ತಿ," ಯನ್ನು ಸ್ಥಾಪಿಸಿದ ಡಾ.ಎಚ.ಬಿ. ರಾಜಶೇಖರ್ ದಂಪತಿಗಳನ್ನು ಈ ಸಂದರ್ಭದಲ್ಲಿ ಶ್ರೀ.ಮಠದಿಂದ ಗೌರವಿಸಲಾಯಿತು.ಇದೇ ಸಂದರ್ಭದಲ್ಲಿ ಶ್ರೀಮಠದಿಂದ ಕೊಡಮಾಡಲಾಗುವ "ಪ್ರಸಾದ ಶ್ರೀ ಗೌರವ" ಪ್ರಶಸ್ತಿಯನ್ನು ಬೆಳಗಾವಿಯ ಶ್ರೀ.ವೈ.ಎನ್.ಶಿಂತ್ರೆ ,ಶೇಗುಣಶಿಯ ಶ್ರೀ.ಮಲ್ಲಪ್ಪ ಬಸಗೌಡ ಗೌಡಪ್ಪನವರ್, ಬೆಳಗಾವಿಯ ಶ್ರೀ.ಬಸಲಿಂಗಪ್ಪ ರುದ್ರಪ್ಪ ಮೆಳವಂಕಿ, ಬೆಳಗಾವಿಯ ಶ್ರೀ ಜಿ.ಎನ್.ಪಾಟೀಲ್ ಇವರುಗಳಿಗೆ ನೀಡಿ ಗೌರವಿಸಲಾಯಿತು.

ಶ್ವೇತಾ ಮುಂಗರವಾಡಿ ಅವರಿಗೆ ಡಾ ಎಚ್ ಬಿ ರಾಜಶೇಖರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಸರ್ವರನ್ನು ಸ್ವಾಗತಿಸಿದರು.ಪ್ರೊ.ಮಂಜುನಾಥ್ ಶರಣಪ್ಪನವರ ಮತ್ತು ರಾಜಶೇಖರ್ ಪಾಟೀಲ್ ಕಾರ್ಯಕ್ರಮ ನಿರ್ವಹಿಸಿದರು, ವಂದಿಸಿದರು ಶಿವಮೊಗ್ಗದ ಶಾಸಕ ಎಸ್.ಎಂ.ಚನಬಸಪ್ಪ, ಡಾ.ಎಫ್.ವಿ.ಮಾನವಿ, ಸುರೇಶ್ ಗಾಡವಿ,ಮಹಿಳಾ ಲೇಖಕೀಯರ ಸಂಘದ ಅಧ್ಯಕ್ಷೆ ಜಯಶೀಲಾ ಬ್ಯಾಕೋಡ, ಶೈಲಜಾ ಭಿಂಗೆ, ಅಶೋಕ ಮಳಗಲಿ, ಮಾಜಿ ನಗರಸೇವಕಿ ಸರಳಾ ಹೇರಕರ ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

